
ಶ್ರೀ ರಾಮಚಂದ್ರ ಮಿಷನ್®

ಆಂತರಿಕ ಪ್ರಸಾರಕ್ಕಾಗಿ ಮಾತ್ರ

ECHOES INDIA

ಸೆಪ್ಟೆಂಬರ್ 2012 ಸಂಪುಟ 6 ಸಂಚಿಕೆ 5


# ಮಣಪಾಕ್ಕಂನ ವಾರ್ತೆ




**ಜೂನ್, 2013**

ಗುರುಗಳು ಬ್ರಹ್ಮಾಂಡ್ ಮತ್ತು ಕಾನ್ಹಾ ಯೋಜನೆಗಳಿಗೆ ಸಂಬಂಧಿಸಿದ ಭೂದಾಖಲೆಗಳಲ್ಲಿ ತೀವ್ರ ಆಸಕ್ತಿ ವ್ಯಕ್ತಪಡಿಸುತ್ತ ಬಂದಿದ್ದು, ಇದರ ಫಲವಾಗಿ ಈ ಪ್ರಯತ್ನದಲ್ಲಿ ನವಚೇತನ ಉಕ್ಕಿಬಂದಿರುವಂತೆ ಕಾಣುತ್ತಿದೆ. ಗುರುಗಳು ಫಾರ್ಮ್ 'ಎ'ಗೆ ಬಂದು, "ನಾನೂ ನಿಮ್ಮಂತೆ ಭೂಮಾಲಕರಲ್ಲಿ ಒಬ್ಬನಾಗಿದ್ದು, ನಮ್ಮೆಲ್ಲರ ಒಳಿತಿಗಾಗಿ ಇದು ಇತ್ಯರ್ಥವಾಗುವುದನ್ನು ನಾನು ಕೂಡಾ ತೀವ್ರವಾಗಿ ಬಯಸುತ್ತಿದ್ದೇನೆ" ಎನ್ನುತ್ತ ಒಂದು ಭಾಷಣವನ್ನಿತ್ತರು.

ಗುರುಗಳು ಬಾಬೂಜಿಯವರ ಬರಹಗಳ ಕೆಲ ಪುಸ್ತಕಗಳನ್ನು ಸೋ. ಕಮಲೇಶ್‌ರವರಿಗೆ ನೀಡಿದರು. ತನ್ನ ಮೂಲ ದಿನಚರಿಗಳ ಸಂಗ್ರಹವನ್ನು ಕೂಡಾ ಗುರುಗಳು ಸೋ. ಕಮಲೇಶ್‌ರವರಿಗೆ ಇತ್ತರು. ಮತ್ತು ಅವರು, ಇದು ಭವಿಷ್ಯತ್ತಿನಲ್ಲಿ ಪ್ರತಿಯೊಬ್ಬರಿಗೂ ತುಂಬ ಉಪಯೋಗಕ್ಕೆ ಬರುವಂಥ ಅಮೂಲ್ಯ ನಿಧಿಯಾಗಿದೆ ಎಂದರು. ಗುರುಗಳು, "ನಾನು ಇದು ಯಾರಿಗಾದರೂ ಉಪಯೋಗಕ್ಕೆ ಬಂದೀತೆಂದು ನಾನು ಎಂದೂ ಭಾವಿಸಿರಲಿಲ್ಲ. ನಾನು ಹಾಗೇ ಸುಮ್ಮನೆ, ನನ್ನದೇ ಕಾರಣಗಳಿಗಾಗಿ, ಬೆಳವಣಿಗೆಯನ್ನು ಗಮನಿಸುತ್ತಿರಲು ಬರೆದೆ" ಎಂದರು. ಗುರುಗಳು 1964ರಿಂದ 1994ರ ವರೆಗೆ ತನ್ನ ದಿನಚರಿಗಳನ್ನು ಕೈಬರಹದಲ್ಲಿ ಬರೆದಿದ್ದು, 1995ರ ನಂತರ ಅದನ್ನು ನೇರವಾಗಿ ಕಂಪ್ಯೂಟರ್‌ನಲ್ಲಿ ಬೆರಳಚ್ಚು ಮಾಡುತ್ತ ಬಂದಿದ್ದಾರೆ.

ಗುರುಗಳು ಒಂದು ಘಟನೆಯ ಬಗ್ಗೆ ಹೇಳಿದರು, ಅವರು ಒಂದುದಿನ ಬೆಳಿಗ್ಗೆ ಸುಮಾರು 5 ಗಂಟೆಗೆ 'ಗಾಯತ್ರಿ'ಯಲ್ಲಿ ಬಾಬೂಜಿಯವರ ಮಲಗುವ ಕೋಣೆಯ ಹೊರಗೆ ಕುಳಿತುಕೊಂಡು ತನ್ನ ದಿನಚರಿಯನ್ನು ಬರೆಯುತ್ತಿದ್ದರಂತೆ. ಒಮ್ಮೆಲೇ ಬಾಬೂಜಿಯವರು ಹೊರಗೆ ಬಂದು ಅದನ್ನು ನೋಡಬೇಕೆಂದು ಕೇಳಿದರು. ಗುರುಗಳು ಅದನ್ನು ಅವರಿಗೆ ತೋರಿಸಿದಾಗ ಬಾಬೂಜಿಯವರು "ಅರೇ, ನಾನು ಹೇಳಿರುವ ಎಲ್ಲವನ್ನೂ ನೀನು ಬರೆದುಕೊಳ್ಳುತ್ತಿರುವೆ. ಸ್ವತಃ ನನಗೇ ನೆನಪಿಲ್ಲದ ಈ ವಿಷಯಗಳನ್ನೆಲ್ಲ ನೀನು ನೆನಪಲ್ಲಿಡುವುದು ಹೇಗೆ?" ಎಂದರು. ಗುರುಗಳು, "ನಾನು ನನ್ನನ್ನು ಆ ದಿನಾಂಕದಲ್ಲಿ ಇಟ್ಟುಬಿಡುತ್ತೇನೆ ಅಷ್ಟೆ ಮತ್ತು ಎಲ್ಲವೂ ನನ್ನ ಮುಂದೆ ಕಾಣಿಸಿಕೊಳ್ಳುತ್ತದೆ" ಎಂದರು. ಇದನ್ನು ಕೇಳಿ ಬಾಬೂಜಿಯವರು ತುಂಬಾ ಸಂತೋಷಗೊಂಡು, "ಇದನ್ನೇ ಸಂಶೋಧನೆ ಎನ್ನುವುದು" ಹೇಳಿದರಂತೆ.

ಮತ್ತೆ ಗುರುಗಳು, ಬಾಬೂಜಿಯವರು ತನ್ನನ್ನು ತಾನು ಮಲಗಿದ ಕೂಡಲೇ ನಿದ್ದೆಹೋಗುವುದು ಹೇಗೆಂಬುದನ್ನು ಕೇಳಿದ ಬಗ್ಗೆ ಹೇಳಿದರು. ಗುರುಗಳು, "ನಾನು ನಿದ್ರೆಯು ನನ್ನ ಹಣೆಯ ಎದುರಿನಿಂದ ನನ್ನ ಕಣ್ಣುಗಳೊಳಗೆ ಇಳಿಯುತ್ತಿದೆ ಎಂದು ಊಹಿಸುತ್ತೇನೆ ಅಷ್ಟೆ ಮತ್ತು ನಿದ್ರಿಸಿಬಿಡುತ್ತೇನೆ." ಎಂದರು. ಬಾಬೂಜಿಯವರು, "ನೋಡು, ಸಂಶೋಧನೆಯೆಂದರೆ ಮಣಗಟ್ಟಲೆ ಕಾಗದಗಳಲ್ಲಿ ಬರೆಯುತ್ತಾ ಇರುವುದಲ್ಲ. ಇದು ಮೂಲ ಸಂಶೋಧನೆ" ಎಂದರಂತೆ.

ಗುರುಗಳು ಮತ್ತೆ, "ನಾನು ಹೆಚ್ಚಿನ ಕೆಲಸವನ್ನೆಲ್ಲ ಬಾಬೂಜಿಯವರೊಂದಿಗೆ ಪ್ರಯಾಣದಲ್ಲಿದ್ದಾಗ ಕಲಿತೆ. ಅವರು ನನ್ನೊಡನೆ ಕೆಲಸ ಮಾಡಲು ಹೇಳಿ ತಾವು ಗಮನಿಸುತ್ತಿದ್ದರು. ಅನೇಕ ಬಾರಿ ಅವರು ನನ್ನನ್ನು ತಮ್ಮ ಪಕ್ಕದಲ್ಲಿ ಕುಳಿತುಕೊಳ್ಳಲು ಹೇಳಿ ತನ್ನೊಡನೆ ಕೆಲಸಮಾಡಲು, ಪ್ರಾಣಾಹುತಿ ನೀಡಲು ಹೇಳುತ್ತಿದ್ದರು. ನಾನು ಅವರೊಂದಿಗೆ ಇನ್ನೂ ಹತ್ತು ವರ್ಷ ಇದ್ದಿರಬೇಕಿತ್ತೆಂದು ಆಶಿಸುತ್ತೇನೆ. ಬಾಬೂಜಿಯವರು ನನ್ನೊಂದಿಗೆ, ತಾನು ಇಲ್ಲಿ ನನ್ನೊಂದಿಗೆ 2006 ಅಥವಾ 2007ರ ತನಕ ಇರುವೆನೆಂದು ಹೇಳುತ್ತಿದ್ದರು, ಆದರೆ ಅವರು ಅನೇಕ ವರ್ಷಗಳ ಮುಂಚೆಯೇ ಬಿಟ್ಟು ಹೊರಟರು" ಎಂದರು.

**ಜುಲೈ, 2013**

ಕೆಲವು ತಿಂಗಳುಗಳ ಮೊದಲು, ಗುರುಗಳು ಅಂತರ್ಜಾಲದಲ್ಲಿ 'ಅನೇಕ ಜನ್ಮಗಳು, ಅನೇಕ ಗುರುಗಳು' *(Many Lives, Many Masters)* ಎಂಬ ಪುಸ್ತಕದ ಕರ್ತೃ ಬ್ರಿಯಾನ್ ವೆಯಿಸ್‌ನ ಒಂದು ನಿವರ್ತನಾವಧಿ *(regression session)* ಯನ್ನು ನೋಡುತ್ತಿದ್ದರು. ಬ್ರಿಯಾನ್ ವೆಯಿಸ್, 'ಪವಾಡಗಳು ಘಟಿಸುತ್ತವೆ'*(Miracles Happen)* ಎಂಬ ಹೊಸ ಪುಸ್ತಕ ಬರೆದಿದ್ದು ಗುರುಗಳು ಈ ಪುಸ್ತಕವನ್ನು ಓದಲಾರಂಭಿಸಿದ್ದಾರೆ. ಓದುವಿಕೆಯು, ನಿವರ್ತನ ಚಿಕಿತ್ಸೆಯ ಮೂಲಕ ಜನರು ತಮ್ಮ ಹಿಂದಿನ ಜನ್ಮಗಳಿಗೆ ಹೋಗುವ ಬಗ್ಗೆ ಇತ್ತು. ಈ ಜನ್ಮದಲ್ಲಿ ನಮ್ಮ ಭೇಟಿಗಳು ಮತ್ತು ಸಾಹಚರ್ಯಗಳು ಹೇಗೆ ಕಾಕತಾಳೀಯವಾಗಿರದೆ ಅನೇಕ ಗತಜನ್ಮಗಳಿಂದ ಅಂಥ ಸಾಹಚರ್ಯಗಳು ಮುಂದುವರಿದಿರುತ್ತವೆ ಎಂಬುದಕ್ಕೆ ನಾವೆಲ್ಲರೂ ಅನೇಕ ನಿದರ್ಶನಗಳಾಗಿದ್ದೇವೆ ಎಂಬ ವಿಷಯವನ್ನು ಅಲ್ಲಿ ತಿಳಿಸಲಾಗಿದೆ.

ಗುರುಗಳು ಏಕ ಕಾಲಕ್ಕೆ 2– 3 ಪುಸ್ತಕಗಳನ್ನು ಓದುತ್ತಾ ಇದ್ದು, ಪ್ರತಿಯೊಂದು ಪುಸ್ತಕಪಠನದ ಅವಧಿಗೂ ಅವರು ಅವುಗಳಲ್ಲಿ ಒಂದನ್ನು ಎತ್ತಿಕೊಳ್ಳುತ್ತಾರೆ. ವಾರಾಂತ್ಯದಲ್ಲಿ ಒಮೆಗಾ ವಿದ್ಯಾಲಯದ ಇಬ್ಬರು ವಿದ್ಯಾರ್ಥಿಗಳು ಗುರುಗಳಿಗೆ ಪುಸ್ತಕಗಳನ್ನು ಗಟ್ಟಿಯಾಗಿ ಓದಿಹೇಳಲೆಂದು ಬರುತ್ತಾರೆ. ಗುರುಗಳು ಪುಸ್ತಕಪಠನವನ್ನು ಆಲಿಸುವಾಗ ತನ್ನ ಕಣ್ಣುಗಳನ್ನು ಮುಚ್ಚಿಕೊಂಡು ಪಠ್ಯಭಾಗದತ್ತ ತನ್ನ ಗಮನವನ್ನು ಕೇಂದ್ರೀಕರಿಸುತ್ತಿರುತ್ತಾರೆ. ಈ ಅವಧಿಯಲ್ಲಿ ಅವರು ಓದುತ್ತಿರುವ ವಿದ್ಯಾರ್ಥಿಯು ತನ್ನನ್ನು ತಿದಿಕೊಳ್ಳಲು ಸಹಾಯವನ್ನು ಕೂಡಾ ಮಾಡುತ್ತಾರೆ.







## ಸಿಂಗಾಪುರ ಧ್ಯಾನಕೇಂದ್ರದ ಉದ್ಘಾಟನೆ

ಜುಲೈ 3, 2013ರ ಬುಧವಾರ: ಗುರುಗಳು, "ನಾವು ಸುದೀರ್ಘಕಾಲದಿಂದ ಸಿಂಗಾಪುರದ ಈ ಧ್ಯಾನಕೇಂದ್ರಕ್ಕಾಗಿ ಕಾಯುತ್ತಲಿದ್ದೇವೆ" ಎಂದು ಹೇಳಿದರು. ಅವರು ತುಂಬ ಬೇಗನೆ ಸಿದ್ಧರಾಗಿದ್ದರು ಮತ್ತು ವೀಡಿಯೋ ಸಂಪರ್ಕದ ಮೂಲಕ ಸಿಂಗಾಪುರದಲ್ಲಿನ ಅಭ್ಯಾಸಿಗಳನ್ನು ಸೇರಿಕೊಳ್ಳಲು ಸರ್ವಸನ್ನದ್ಧರಾಗಿದ್ದರು. ಸಿಂಗಾಪುರ ಅಭ್ಯಾಸಿಗಳಿಗೆ ಮೊದಲೇ, ಅವರು ಧ್ಯಾನಕ್ಕೆ ಕುಳಿತುಕೊಳ್ಳಬೇಕು ಮತ್ತು ತದನಂತರ ಗುರುಗಳು ಸೇರಿಕೊಳ್ಳುತ್ತಾರೆ ಎಂದು ಸೂಚಿಸಲಾಗಿತ್ತು. ಸಿಂಗಾಪುರ ಧ್ಯಾನಕೇಂದ್ರದಲ್ಲಿ ಸತ್ಸಂಗ ಮುಗಿದ ಕೂಡಲೇ ಗುರುಗಳು ಆತುರದಿಂದ ತನ್ನ ಕಛೇರಿಗೆ ನಡೆದುಕೊಂಡು ಬಂದರು. ಅವರು ಸಿಂಗಾಪುರ ಅಭ್ಯಾಸಿಗಳೆಲ್ಲರನ್ನೂ ಅಭಿವಾದಿಸಿದರು ಮತ್ತು ಒಂದು ಸುಂದರವಾದ ಭಾಷಣವನ್ನಿತ್ತರು. ಅದರಲ್ಲಿ ಅವರು ಶಿಶುಗೀತೆ, 'ಮಿನುಗೆಲೆ ಮಿನುಗೆಲೆ ನಕ್ಷತ್ರ'ವನ್ನು ಉಲ್ಲೇಖಿಸಿ, "ನಿಮಗೆ ಗೊತ್ತು, ವಜ್ರವು ಬೆಳಕನ್ನು ಹೊರಗಿನಿಂದ ಪ್ರತಿಫಲಿಸುವುದಿಲ್ಲ, ಅದರಲ್ಲಿ 'ಸಂಪೂರ್ಣ ಆಂತರಿಕ ಪ್ರತಿಫಲನ' ಎಂಬುದು ಇರುತ್ತದೆ. ವಜ್ರದ ಒಳಗಡೆ ಬೆಳಕು ತಪ್ಪಿಸಿಕೊಳ್ಳದೆ ಸಂಪೂರ್ಣವಾಗಿ ಪ್ರತಿಫಲಿಸಲ್ಪಡುತ್ತದೆ. ಆದ ಕಾರಣವೇ ಅದು ಅಷ್ಟೊಂದು ಉಜ್ವಲ, ಸುಂದರ ಮತ್ತು ಅದ್ಭುತವಾಗಿರುತ್ತದೆ. ...ನಾವು ಧ್ಯಾನಿಸಬೇಕೆಂದು ಹೇಳಲಾಗಿರುವ, ನಮ್ಮಹೃದಯದಲ್ಲಿನ ಬೆಳಕನ್ನು ಬೆಳೆಯಗೊಟ್ಟು ಅದು ಒಳಗಡೆ ಪ್ರತಿಫಲಿಸುತ್ತಾ ಹೋಗಲು ಬಿಡಬೇಕು, ಅಂದರೆ ಒಂದು ದಿನ ನಾವೂ ಒಂದು ನಕ್ಷತ್ರದಂತಾಗುತ್ತೇವೆ." ಎಂದರು. ಆಮೇಲೆ ಗುರುಗಳು ಮಕ್ಕಳನ್ನು ಮುಂದೆ ಬರುವಂತೆ ಕರೆದು ಅವರಿಗೆ, ಪ್ರಾಕೃತಿಕವಾದ ಪ್ರತಿಯೊಂದೂ ಹೇಗೆ ಒಳಗಿನಿಂದ ಹೊರಗಡೆಗೆ ಬೆಳೆಯುತ್ತದೋ ಹಾಗೆ, ಆಧ್ಯಾತ್ಮಿಕ ಜೀವನವೂ ಆಂತರ್ಯದಿಂದ ಬೆಳೆಯಬೇಕು ಎಂದು ಹೇಳಿದರು.

ಒಂದುದಿನ, ಗುರುಗಳು ಬೇಗನೆ ಎದ್ದಿದ್ದರು ಮತ್ತು ಹೊರಗೆ ಬಂದು ಕುಳಿತುಕೊಳ್ಳಲು ನಿರ್ಧರಿಸಿದರು. ಸ್ವಲ್ಪಹೊತ್ತು ಅವರು ಮೌನವಾಗಿ ಕುಳಿತಿದ್ದರು ಮತ್ತು ಆನಂತರ ತನಗೆ ವಾರ್ತಾಪತ್ರಿಕೆಯನ್ನು ಓದಿಹೇಳಲು ಹೇಳಿದರು. ಹೇಗಿದ್ದರೂ, ಸ್ವಲ್ಪಹೊತ್ತಿನ ನಂತರ ಸೋ. ಸತ್‌ಬೀರ್ ಬಂದಂತೆ ಗುರುಗಳ ಮನಸ್ಸು ಇಮೇಲ್‌ಗಳನ್ನು ನೋಡುವತ್ತ ಹೊರಳಿತು. ಅವರ ಚಡಪಡಿಕೆ ಎದ್ದು ಕಾಣುವಂತಿತ್ತು ಮತ್ತು ಅವರು ತನ್ನ ಇಮೇಲ್‌ಗಳನ್ನು ನೋಡ ತೊಡಗಿದರು. ಅವರಿಗೆ ಯಾವಾಗಲೂ ಕೆಲಸವು ಪ್ರಥಮವಾಗಿರುತ್ತದೆ.

## ಜುಲೈ 10,2013 ಬುಧವಾರ

ಗುರುಗಳು ಪೂರ್ವಾಹ್ನ 9 ಗಂಟೆಯ ಸತ್ಸಂಗವನ್ನು ನಡೆಸಿಕೊಟ್ಟರು, ಅದು ಸುಮಾರು ನಲುವತ್ತು ನಿಮಿಷಗಳ ಅವಧಿಯದ್ದಾಗಿತ್ತು. ಅನಂತರ ಅವರು ನಾಲ್ಕು ವಿವಾಹಗಳನ್ನು ಮತ್ತು ಒಂದು ನಿಶ್ಚಿತಾರ್ಥವನ್ನು ನಡೆಸಿಕೊಟ್ಟರು. ಇದಾದ ನಂತರ ಗುರುಗಳು ತುಂಬ ಬಳಲಿದಂತೆ ಕಂಡುಬಂದು ವಿಶ್ರಾಂತಿ ತೆಗೆದುಕೊಳ್ಳಲು ಹೋದರು. ಅದೇ ಸಾಯಂಕಾಲ ಹೊರಗೆ ಸೋನೆ ಸುರಿಯುತ್ತಿದ್ದ ಕಾರಣ ಗುರುಗಳು ಕುಟೀರದ ಮುಖಮಂಟಪದಿಂದಲೇ ಸತ್ಸಂಗವನ್ನು ನಡೆಸಿಕೊಟ್ಟರು. ಸತ್ಸಂಗ ಮುಗಿದ ನಂತರ ಸುಮಾರು ಅರ್ಧಗಂಟೆಯ ಕಾಲ ಮಳೆ ಸ್ವಲ್ಪ ಜೋರಾಗಿಯೇ ಸುರಿಯಿತು.

ಬರಲಿರುವ ಜನ್ಮದಿನೋತ್ಸವ ಆಚರಣೆಗೆ ಚೆನ್ನೈಯಲ್ಲಿ ಸುಮಾರು 10,000 ಅಭ್ಯಾಸಿಗಳಿಗೆ ವಾಸ್ತವ್ಯಕ್ಕೆ ಅನುಕೂಲತೆ ಕಲ್ಪಿಸಿಕೊಡಲು ಏರ್ಪಾಡುಗಳನ್ನು ಮಾಡಲಾಗುತ್ತಿದ್ದು, ಗುರುಗಳು ಅದರ ಸಲುವಾಗಿ ಆಯ-ವ್ಯಯ ಪಟ್ಟಿಯನ್ನು ಸಿದ್ಧಪಡಿಸಿ ತನಗೆ ಒಪ್ಪಿಸಬೇಕೆಂದು ಹೇಳಿದರು.

ಚೆನ್ನೈಯಲ್ಲಿ ಮುಂಗಾರು ಆರಂಭವಾಗಿದೆ. ಒಂದು ರಾತ್ರಿ ಗುರುಗಳು ತನ್ನ ಗಾಲಿ ಕುರ್ಚಿಯಲ್ಲಿ ಹೊರಗೆ ಬಂದು ಸುರಿಯುತ್ತಿರುವ ಕುಂಭದ್ರೋಣ ಮಳೆಯನ್ನು ನೋಡುತ್ತ ಆನಂದಿಸಿದರು. ಅವರು, "ನಮ್ಮ ನೀರಿನ ಸಮಸ್ಯೆಗಳನ್ನು ಪರಿಹರಿಸಲು ಈ ರೀತಿ ಮಳೆ ಕನಿಷ್ಠ ಎರಡು ಗಂಟೆಗಳ ಕಾಲ ಸುರಿಯಬೇಕು" ಎಂದರು.

ಗುರುಗಳು ಬಹುತೇಕ ಪ್ರತಿದಿನವೂ ಒಂದು ಪ್ರಶಿಕ್ಷಕ ಬೈಠಕ್ ಕೊಡುವುದರಲ್ಲಿ ನಿಯತರಾಗಿದ್ದಾರೆ. ದಿನದಲ್ಲಿ ಅವರು ಮಾಡಬಯಸುವ ಮೊದಲನೇ ಕೆಲಸ ಇದಾಗಿದ್ದು ಈ ಕೆಲಸದಲ್ಲಿ ಅವರು ಎಷ್ಟು ಗಮನ ಕೇಂದ್ರೀಕರಿಸುತ್ತಾರೆಂದರೆ ಇದನ್ನು ಮಾಡಿ ಮುಗಿಸುವ ತನಕ ಅವರನ್ನು ಇತರ ಯಾವುದೇ ಸಮಾಚಾರದ ಕಾರಣದಿಂದಾಗಿಯೂ ವಿಚಲಿತರನ್ನಾಗಿಸಲಾಗದು.


## ಜುಲೈ 13, 2013 ಶನಿವಾರ

ಗುರುಗಳಿಗೆ ಈ ದಿನ ಅನೇಕ ಬೈಠಕ್‌ಗಳು ಸಾಲುಗಟ್ಟಿ ನಿಂತಿದ್ದವು. ಪೂರ್ವಾಹ್ನ 7.15ರ ಹೊತ್ತಿಗೆ ಅವರು ತನ್ನ ಬೈಠಕ್‌ಗಳನ್ನು ಮುಗಿಸಿದರು. ತದನಂತರ ಕಣ್ಣಿನ ಚಿಕಿತ್ಸೆ ಆರಂಭವಾಯಿತು. ಎಲ್. ಸುಬ್ರಮಣಿಯನ್‌ರವರ ಸಂಗೀತವನ್ನು ಗುರುಗಳು ಕೇಳಿಸಿಕೊಳ್ಳುತ್ತಿದ್ದಾಗ ಅವರ ಕ್ಷೌರವನ್ನು ಮುಗಿಸಲಾಯಿತು. ಅಷ್ಟು ಹೊತ್ತಿಗೆ, ಅವರ ಒಬ್ಬ ಆತ್ಮೀಯ ಸಹವರ್ತಿಯಾದ, ಅಭ್ಯಾಸಿಯೊಬ್ಬರು ನಿಧನರಾದ ಸುದ್ದಿ ಅವರಿಗೆ ತಲುಪಿತು. ಗುರುಗಳ ಮನೋಲಹರಿ ಬದಲಾಗಿ ಅವರು ಸಂಪೂರ್ಣವಾಗಿ ಬೇರೆಯೇ ಲೋಕದಲ್ಲಿ ಇದ್ದರು. ಅವರೆಂದರು, "ಒಂದು ಕ್ಷಣ ಇಲ್ಲಿ, ಇನ್ನೊಂದು ಕ್ಷಣ ಹೋಗಿ ಆಯ್ತು. ಎಲ್ಲಿ, ಯಾರೂ

ಅರಿಯರು.'' ಇದರ ನಂತರ ಮುಂದಿನ ಒಂದು ಗಂಟೆಯ ಕಾಲ ಅವರು ಸಂಪೂರ್ಣ ಮೌನವಾಗಿ ಕಣ್ಣು ಮುಚ್ಚಿಕೊಂಡೋ ಅಥವಾ ಆಕಾಶದೊಳಗೆ ದಿಟ್ಟಿಸುತ್ತಲೋ ಸುಮ್ಮನೆ ಕುಳಿತಿದ್ದರು.

## ಜುಲೈ 14, 2013 ರವಿವಾರ

ಗುರುಗಳು ಧ್ಯಾನಮಂದಿರಕ್ಕೆ ಹೋಗಲು ಯೋಚಿಸಿದ್ದರೂ ಮುಂಜಾನೆ ಅವರು ಸ್ವಲ್ಪ ಅಸ್ವಸ್ಥರಾಗಿದ್ದ ಕಾರಣ ವೈದ್ಯರು ಅವರಿಗೆ ಕುಟೀರದಲ್ಲೇ ಇರುವಂತೆ ಸಲಹೆ ಮಾಡಿದ್ದರು. ಕುಟೀರದ ನಡುವಣ ಹಜಾರವು ಗುರುಗಳಿಗೆ ವಿವಾಹಗಳನ್ನು ನೆರವೇರಿಸುವ ಸ್ಥಳವಾಯಿತು. ಅವರು ಸತ್ಸಂಗವನ್ನು ನಡೆಸಿಕೊಟ್ಟು ಐದು ವಿವಾಹಗಳನ್ನು ನೆರವೇರಿಸಿದರು.



ಸೋ. ಸಂಸ್ಕೃತ ಕಣ್ಣನ್‌ರವರ ಗೀತಾ ಉಪನ್ಯಾಸವನ್ನು ಆಲಿಸಲು ಗುರುಗಳು ಹಜಾರದಲ್ಲಿ ಕುಳಿತಿದ್ದು, ಈ ಕಾರ್ಯಕ್ರಮವು ಒಂದುಗಂಟೆಯ ಕಾಲ ನಡೆಯಿತು. ಇದುವರೆಗೆ ಗೀತೆಯ ಆರು ಅಧ್ಯಾಯಗಳು ಸಮಾಪ್ತವಾಗಿವೆ. ಪ್ರತಿ ಉಪನ್ಯಾಸದ ಕೊನೆಯಲ್ಲೂ ಗುರುಗಳು ಸಾಮಾನ್ಯವಾಗಿ ಉಪಸಂಹಾರದ ಕೆಲವು ನುಡಿಗಳನ್ನಾಡುತ್ತಾರೆ.

ಜುಲೈ 20ರಂದು, ಭಾರ್ಗವ್ ಯುಎಸ್‌ಎಯಿಂದ ಹಿಂದಿರುಗಿದ್ದು ಇದರಿಂದಾಗಿ ಗುರುಗಳು ಆನಂದತುಂದಿಲರಾಗಿದ್ದರು ಮತ್ತು ''ಸುಸ್ವಾಗತ ಮೊಮ್ಮಗು, ನಾನು ನಿನಗಾಗಿ ಕಾಯುತ್ತಲಿದ್ದೇನೆ'' ಎಂದರು. ಅವರು ಸ್ವಲ್ಪಕಾಲ ತನ್ನ ಕುಟುಂಬದೊಂದಿಗೆ ಕಳೆದು ಬಳಿಕ ಅಲ್ಲಿ ಉಪಸ್ಥಿತರಿದ್ದವರಿಗೆ ಒಂದು ಬೈಠಕ್ ಕೊಟ್ಟರು. ಬೈಠಕ್‌ನ ಬಳಿಕ ಗುರುಗಳು ವಿವಿಧ ತರಬೇತಿ ಕಾರ್ಯಕ್ರಮಗಳ ಬಗ್ಗೆ ಸೋ. ವುಲಿಮೀರ್ ಮತ್ತು ಸೋ. ಅಲ್ಬರ್ಟೋರವರೊಡನೆ ಚರ್ಚಿಸಿದರು. ಗುರುಗಳು ಅವರೊಡನೆ, ''ಬೆಳವಣಿಗೆಯೊಂದಿಗೆ ಅಹಂಕಾರ ಸೇರಿಕೊಳ್ಳದ ಹಾಗೆ ಬೆಳೆಯುವುದು ಹೇಗೆ?– ಅದೇ ವಿಷಯದ ರಹಸ್ಯ. ಉದಾಹರಣೆಗೆ ಮಕ್ಕಳನ್ನು ತೆಗೆದುಕೊಳ್ಳಿ. ಅವರಿಗೆ ಮೂರುವರ್ಷವಾಗುತ್ತಲೇ ಅವರು ಅಹಮಿಕೆ ಉಳ್ಳವರಾಗುತ್ತಾರೆ. ಅಪ್ಪ, 'ಇದನ್ನು ಮಾಡು' ಎನ್ನುತ್ತಾನೆ. 'ನನಗೆ ಗೊತ್ತು.' ಬೆಳವಣಿಗೆಯ ಆರಂಭದಲ್ಲಿ, ಆತ್ಮವಿಶ್ವಾಸವನ್ನು ಕೊಡಲು, ಜಗತ್ತನ್ನು ಎದುರಿಸಲು, ಸಮಾಜೀಕರಿಸಲು, ಯಾವುದೋ ರೀತಿಯಲ್ಲಿ ಇದು ಅಗತ್ಯವಿರುವಂತೆ ಕಾಣಿಸುತ್ತದೆ. ಆದರೆ, ಅದು ಹಾಲುಹಲ್ಲುಗಳಿದ್ದಂತೆ, ನಮ್ಮ ಹಲ್ಲುಗಳ ಮೊದಲ ಪಂಕ್ತಿ, ಅವು ಹೋಗಬೇಕಾಗುತ್ತದೆ. ಅದೇ ರೀತಿಯಲ್ಲಿ, ಈ ಅಹಂ ಎನ್ನುವುದು ಪಕ್ವವಾಗಬೇಕಾಗುತ್ತದೆ ಅಥವಾ ವಿನಮ್ರತೆಯಾಗಿ ಅರಳಬೇಕಾಗುತ್ತದೆ.'' ಎಂದರು.

## ಜುಲೈ 22, 2013 ಸೋಮವಾರ, ಗುರುಪೂರ್ಣಿಮೆ

ತನ್ನ ಗುರುವಿನ ಸನ್ನಿಧಿಯಲ್ಲಿರುವಾಗ ಅಭ್ಯಾಸಿಯ ಜೀವನದ ಅತ್ಯಂತ ಮಹತ್ವಪೂರ್ಣವಾದ ದಿನ. ಆಶ್ರಮವು ಅಭ್ಯಾಸಿಗಳಿಂದ ತುಂಬಿಹೋಗಿತ್ತು. ಗುರುಗಳು ತುಂಬ ಬೇಗನೆ ಸಿದ್ಧರಾಗಿದ್ದರು ಮತ್ತು ಬೆಳಿಗ್ಗೆ ಕೆಲ ಅಭ್ಯಾಸಿಗಳನ್ನು ಭೇಟಿಯಾದರು. ಹೈದರಾಬಾದ್ ತಂಡವು ಕಾನ್ಹಾ ಶಾಂತಿವನಂನ ಬೃಹತ್ ಮಾದರಿಯೊಂದನ್ನು ತಂದಿದ್ದು ಗುರುಗಳು ಅದನ್ನು ಸವಿವರಪೂರ್ವಕವಾಗಿ ಪರಿಶೀಲಿಸಿದರು. ಅವರು ಆ ಮಾದರಿಯಿಂದ ಪ್ರಭಾವಿತರಾಗಿದ್ದು ಹೆಮ್ಮೆಯಿಂದ ಅನೇಕ ಅಭ್ಯಾಸಿಗಳನ್ನು ಅದನ್ನು ನೋಡಲು ಕರೆದರು ಮತ್ತು ಅದರ ವಿವಿಧ ರೂಪರೇಷೆಗಳನ್ನು ಅವರಿಗೆ ವಿವರಿಸಿದರು.

ಗುರುಗಳು ಬೆಳಗಿನ ಸತ್ಸಂಗವನ್ನು ಧ್ಯಾನಮಂದಿರದಲ್ಲಿ ನಡೆಸಿಕೊಟ್ಟರು ಮತ್ತು ತದನಂತರ ಒಂದು ಭಾಷಣವನ್ನಿತ್ತರು. ಅದರಲ್ಲಿ ಅವರು, ''ಸಹಜಮಾರ್ಗವು ನಮಗೆ ನೀಡಲು *ಅನಂತ* ವರಪ್ರಸಾದಗಳನ್ನು ಹೊಂದಿದೆ. ಆದರೆ ನಾವು ಎಷ್ಟನ್ನು ತೆಗೆದುಕೊಂಡು ಹೋಗಲು ಶಕ್ತರಾಗಿದ್ದೇವೆ? ನಿಮ್ಮನ್ನು ನೀವು ಪ್ರಾಮಾಣಿಕವಾಗಿ ಪರೀಕ್ಷಿಸಿಕೊಂಡು ಮೌಲ್ಯಮಾಪನ ಮಾಡುವ ಅಗತ್ಯದಿಂದ ಮತ್ತು ಕನಿಷ್ಠಪಕ್ಷ ಈಗಿನಿಂದಲಾದರೂ ನಿಮ್ಮಲ್ಲಿದೆ ಎಂದು ನಿಮಗೆ ಗೊತ್ತಿರುವ ಎಲ್ಲ ಕೊಳಕುಗಳನ್ನು ಹೊರಗೆಸೆಯಲು ಆರಂಭಿಸುವುದರಿಂದ ನಿಮ್ಮನ್ನು ಹೊರತುಪಡಿಸಿಕೊಳ್ಳಬೇಡಿ.'' ಎಂದು ಹೇಳಿದರು.

## ಗುರುಗಳ 87ನೆಯ ಜನ್ಮದಿನೋತ್ಸವಾಚರಣೆ

ಗುರುಗಳು ಮುಂಜಾನೆ ಬಹಳ ಬೇಗನೆ ಸಿದ್ಧರಾಗಿದ್ದರು. ಅವರು ಪಾಕಶಾಲೆಯ ತಂಡವು ತಂದಿದ್ದ ಪ್ರಸಾದವನ್ನು ಅರ್ಪಿಸಿದರು ಮತ್ತು ಅವರ ಕೋರಿಕೆಯ ಮೇರೆಗೆ ಒಂದು ಕೇಕನ್ನು ತುಂಡು ಮಾಡಿದರು. ಸೋ. ಕೃಷ್ಣ ಹಾಗೂ ಕುಟುಂಬದವರು ಮತ್ತು ಸೋ. ಕಮಲೇಶ್ ಹಾಗೂ ಕುಟುಂಬದವರು ಗುರುಗಳನ್ನು ಭೇಟಿಯಾದರು. ಸೂರ್ಯ ಮೇಲೇರುವ ಮೊದಲೇ ಅಭ್ಯಾಸಿಗಳ ದೊಡ್ಡ ಗುಂಪೊಂದು ಕುಟೀರದ ಮುಖ್ಯದ್ವಾರದಲ್ಲಿ ಕಾಯುತ್ತಿತ್ತು. ಗುರುಗಳು ತನ್ನ ಶಯನಗೃಹದಲ್ಲಿ ಕುಳಿತಿದ್ದರು, ಗುರುಗಳನ್ನು ಭೇಟಿಯಾಗಿ ಶುಭಾಶಯ ಸಲ್ಲಿಸುವುದಕ್ಕಾಗಿ ಅಭ್ಯಾಸಿಗಳಿಗೆ ಕುಟೀರದಲ್ಲಿನ ಸ್ವಯಂಸೇವಕರು ಅನುವು ಮಾಡಿಕೊಟ್ಟರು. ಗುರುಗಳು ಹೊರಬಂದು ಸತ್ಸಂಗವನ್ನು ನಡೆಸಿಕೊಡುವ ಮೊದಲೇ ಸುಮಾರು 250 ಅಭ್ಯಾಸಿಗಳು ಗುರುಗಳನ್ನು ಭೇಟಿ ಮಾಡಿರಬಹುದು. ಗುರುಗಳು ಧ್ಯಾನಮಂದಿರಕ್ಕೆ ತನ್ನ ಗಾಲಿಕುರ್ಚಿಯಲ್ಲಿ ಬಂದಿಳಿದರು. ಈ ವರ್ಷ








ಭಂಡಾರವಿರದೆ ಗುರುಗಳ ಜನ್ಮದಿನವನ್ನು ತಮ್ಮ ಸ್ಥಳೀಯ ಕೇಂದ್ರಗಳಲ್ಲಿ ಆಚರಿಸಬೇಕೆಂದು ಅಭ್ಯಾಸಿಗಳನ್ನು ಕೇಳಿಕೊಳ್ಳಲಾಗಿದ್ದ ಕಾರಣ, ಚೆನ್ನೈಯಲ್ಲಿ ನಡೆಯುವ ಕಾರ್ಯಕ್ರಮಗಳ ನೇರ ಪ್ರಸಾರಕ್ಕಾಗಿ ಒಂದು ವೀಡಿಯೊ ಸಂಪರ್ಕವನ್ನು ಕಲ್ಪಿಸಿಕೊಡಲಾಗಿತ್ತು. ಸತ್ಸಂಗ, ಪುಸ್ತಕ ಬಿಡುಗಡೆ, ಗುರುಗಳ ಭಾಷಣ, ಮತ್ತೆ ಗುರುಗಳು ಹೊರಡಲಿದ್ದಾರೆಂಬ ಪ್ರಕಟಣೆ, ಆದರೆ ಗುರುಗಳು ಕೂಡಲೇ ಮತ್ತೆ ಮಾತನಾಡಬಯಸಿದರು, ಹೀಗಾಗಿ ಎರಡು ಭಾಷಣಗಳು, ಭಜನೆಗಳು; ಇವೆಲ್ಲವೂ ಮಣಪಾಕ್ಕಂ ಮತ್ತು ಉಳಿದೆಡೆಯಲ್ಲಿ ಉಪಸ್ಥಿತರಿದ್ದವರೆಲ್ಲರಿಗೆ ಸ್ವರ್ಗೀಯ ಆನಂದಭಾವವನ್ನುಂಟು ಮಾಡಿದವು.

ತನ್ನ ಮೊದಲ ಭಾಷಣದಲ್ಲಿ ಗುರುಗಳು, ನಮ್ಮ ಆಧ್ಯಾತ್ಮಿಕ ವಿಕಸನವು ಕೇವಲ ನಮ್ಮ ಸಲುವಾಗಿ ಅಲ್ಲ, ನಮ್ಮ ಮಕ್ಕಳು ನಮ್ಮೊಂದಿಗೆ ವಿಕಾಸಹೊಂದಬೇಕು ಮತ್ತು ನಮ್ಮ ಸಾಮಾಜಿಕ ವಲಯವೂ ನಮ್ಮೊಂದಿಗೆ ವಿಕಾಸಹೊಂದಬೇಕು ಎಂಬುದನ್ನು ನೆನಪಿಸಿದರು. ಅವರು, "ಆಯ್ಕೆಯ ಸ್ವಾತಂತ್ರ್ಯವು ನಮಗೆ ಅತ್ಯಂತ ಅಪಾಯಕರವಾದ ಸಂಗತಿ, ಏಕೆಂದರೆ ನಿಮಗೆ ಆರಿಸುವ ವಿವೇಕವಿರದೆ ಹೋದರೆ, ಅದು ಎಲ್ಲ ಕೆಡುಕುಗಳಿಗೆ ಸ್ವತಃ ನಿಮ್ಮನ್ನು ಗುರಿಮಾಡಲು ನಿಮಗೆ ನೆರವೀಯುವುದು. ಸಹಜಮಾರ್ಗ ಸರಳವಾಗಿದೆ. ಆದರೆ ಸರಳವಾಗಿರಲು ಧೈರ್ಯ ಬೇಕಾಗುತ್ತದೆ. ನಿಮ್ಮ ಹೃದಯದಲ್ಲೇನಿದೆಯೋ ಅದನ್ನು ಹೇಳಲು ಧೈರ್ಯ ಬೇಕಾಗುತ್ತದೆ." ಎಂದೂ ಹೇಳಿದರು.



ತನ್ನ ಎರಡನೆ ಭಾಷಣದಲ್ಲಿ ಗುರುಗಳು, "ನೀವೆಲ್ಲರೂ ಇಲ್ಲದೆ ನಾನು ಒಬ್ಬಂಟಿ ಎನಿಸುತ್ತದೆ. ಉತ್ಸವ ಆರಂಭವಾಗುವ ಮೊದಲೇ ನಾನು ಯೋಚಿಸುತ್ತಿರುತ್ತೇನೆ ಏನೆಂದರೆ ಅವರೆಲ್ಲರೂ ಕೇವಲ ಕೆಲವು ದಿನಗಳಿಗಾಗಿ ಬರುತ್ತಾರೆ ಮತ್ತು ಆಮೇಲೆ ಅವರೆಲ್ಲ ನನ್ನನ್ನು ಬಿಟ್ಟು ಹೊರಡುತ್ತಾರೆ ಮತ್ತು ನನಗೆ ತೀರಾ ಒಬ್ಬಂಟಿಯೆನಿಸುತ್ತದೆ, ತೀರಾ ಬೇಸರವೆನಿಸುತ್ತದೆ. ಹಾಗಾಗಿ ನನ್ನ ಒಂಟಿತನವನ್ನು ಹೋಗಲಾಡಿಸಲು ನನಗೆ ನನ್ನ ಆಧ್ಯಾತ್ಮಿಕ ವಿಧಾನದಲ್ಲಿ, ಯಾರ ಉಪಸ್ಥಿತಿಯ ಸಂವೇದನೆಯನ್ನು, ಅವರು ಇಲ್ಲಿರಲಿ ಇಲ್ಲದಿರಲಿ, ನಾನು ಸದಾ ಹೊಂದುವೆನೋ ಅಂಥ ಸಂಗಾತಿಗಳ ಅಗತ್ಯ ನನಗಿದೆ." ಎಂದರು.

ಬೆಳಗಿನ ಅಧಿವೇಶನದ ತರುವಾಯ, ಗುರುಗಳು ತನ್ನ ಕುಟೀರದಲ್ಲಿ ಅಭ್ಯಾಸಿಗಳನ್ನು ಭೇಟಿಯಾಗುವುದನ್ನು ಮುಂದುವರಿಸಿದ್ದರು. ಮಧ್ಯಾಹ್ನದ ಸುಮಾರಿಗೆ, ಐವತ್ತುಮಂದಿ ರಶ್ಯಾ ಅಭ್ಯಾಸಿಗಳ ಗುಂಪೊಂದು ಗುರುಗಳ ಮಲಗುವಕೋಣೆಯಲ್ಲಿ ತುಂಬಿಕೊಂಡು ಆ ವಾತಾವರಣವು ಬದಲಾಯಿತು, ಒಂದು ಹಗುರತೆ ಪ್ರವೇಶಿಸಿತು, ಮತ್ತು ಒಮ್ಮೆಲೇ ಗುರುಗಳು ಒಂದು ಬೈಠಕ್ ಕೊಡಲು ನಿರ್ಧರಿಸಿದರು! ಆಮೇಲೆ ಅವರು ರಶ್ಯಾಕ್ಕೆ ಹೋಗಲು ತೀವ್ರ ಆಸಕ್ತಿಯನ್ನು ವ್ಯಕ್ತಪಡಿಸಿದರು ಮತ್ತು ರಶ್ಯಾ ತಂಡವು ಮುಂದಿನ ಬೇಸಗೆಯಲ್ಲಿ ಈ ಯೋಜನೆಯನ್ನು ಹಾಕಿಕೊಳ್ಳುತ್ತಿದೆ. ಇಂಥ ಸ್ವಯಂಪ್ರೇರಿತ ಹರ್ಷಭರಿತ ಸಂಗತಿ ನಡೆಯುವಾಗ ಗುರುಗಳ ಆರೋಗ್ಯವು ಒಂದು ವಿವಾದಾಂಶವಾಗಲಾರದು. ತನ್ನ ಸೂಕ್ಷ್ಮ ಸ್ವಾಸ್ಥ್ಯದ ಹೊರತಾಗಿಯೂ ಪ್ರಯಾಣಮಾಡುವ ಅವರ ಅತೀವ ಆಸಕ್ತಿಯು ಅನೇಕರ ಕಣ್ಣುಗಳಲ್ಲಿ ಆನಂದ ಭಾಷ್ಪವನ್ನು ತಂದಿತ್ತು.

ಸಾಯಂಕಾಲ ಧ್ಯಾನಮಂದಿರದಲ್ಲಿ ಕೊಳಲುವಾದಕ ಸೋ. ಶಶಾಂಕರವರು ಸಮ್ಮಿಲನ ಶೈಲಿಯ ವಾದನ ಕಚೇರಿ ನಡೆಸಿಕೊಟ್ಟರು. ಗುರುಗಳು ಕಾರ್ಯಕ್ರಮದ ಭಾಗವನ್ನು ನೇರಪ್ರಸಾರದ ಮೂಲಕ ಆಸ್ವಾದಿಸಿದರು. ಗುರುಗಳು ಒಂದು ಚಲನಚಿತ್ರ ವೀಕ್ಷಿಸಿ ರಾತ್ರಿ ಹತ್ತು ಗಂಟೆಗೆ ಮಲಗಲು ಹೋಗುವುದರೊಂದಿಗೆ ಆ ದಿನವು ಎಂದಿನಂತೆ ಕೊನೆಗೊಂಡಿತು.





### ಜುಲೈ 25, 2013 ಗುರುವಾರ

ಗುರುಗಳು ತನ್ನ ಕಛೇರಿಯಲ್ಲಿ ತನ್ನ ಇಮೇಲ್‌ಗಳನ್ನು ನೋಡುತ್ತಿದ್ದು ಸತ್ಸಂಗ ಕೊನೆಗೊಳ್ಳುವುದನ್ನು ಕಾಯುತ್ತಿದ್ದರು. ಅವರು ಆನಂತರ ಸೋ. ಕಮಲೇಶ್‌ರವರ ಭಾಷಣವನ್ನು ಅತ್ಯಾಸಕ್ತಿಯಿಂದ ಆಲಿಸಿದರು. ತದನಂತರ, ಮಾಲ್ಡೋವಾ ಧ್ಯಾನಕೇಂದ್ರದ ಮೇಲಿನ ಕಿರುಚಿತ್ರಣವನ್ನು ಪ್ರದರ್ಶಿಸಲಾಯಿತು. ಅದನ್ನು ಗುರುಗಳು ನೋಡಿ ಬಹುವಾಗಿ ಆನಂದಿಸಿದರು. ಧ್ಯಾನಕೇಂದ್ರದ ವಿನ್ಯಾಸ ಅದ್ಭುತವಾಗಿದೆ. ಪಾಕಶಾಲೆ ಮತ್ತು ಭೋಜನಶಾಲೆಗಳು ಅತ್ಯುತ್ತಮ ದರ್ಜೆಯದಾಗಿದ್ದು, ವಸತಿಕೋಣೆಗಳು ಐಷಾರಾಮಿ ಹೋಟೆಲಿನ ಕೋಣೆಗಳಂತೆ ಕಾಣುತ್ತವೆ. ಧ್ಯಾನಮಂದಿರವು ಹಾರಲು ಸಿದ್ಧವಾದ ಆಕಾಶನೌಕೆಯಂತೆ ಕಾಣುತ್ತದೆಯೆಂದು ಗುರುಗಳು ಹೇಳಿದರು! ಅಷ್ಟು ಪುಟ್ಟ ಕೇಂದ್ರದ ಕಡಿಮೆ ಸಂಖ್ಯೆಯ ಅಭ್ಯಾಸಿಗಳ ಈ ಪ್ರಯತ್ನವನ್ನು ಕಂಡು ಗುರುಗಳು ಮತ್ತು ಸೋ.ಕಮಲೇಶ್‌ರವರು ಬಹಳ ಸಂತೋಷ ಪಟ್ಟರು. ವಿಡಿಯೋ ವೀಕ್ಷಣೆಯ ನಂತರ, ಗುರುಗಳು ಆ ಗುಂಪಿನವರಿಗಾಗಿ ಸತ್ಸಂಗ ನಡೆಸಿಕೊಟ್ಟು ನಂತರ ಬೈಠಕಿನಲ್ಲಿ ಅವರಿಗಾದ ಅನುಭವವನ್ನು ಹೇಳುವಂತೆ ಕೇಳಿದರು. ಪ್ರತಿಯೊಬ್ಬರೂ ತಮಗೇನನಿಸಿತೆಂದು ಹೇಳಿದ ನಂತರ ಗುರುಗಳು ಹೇಳಿದರು, "ಈ ಬೈಠಕು ವಿಶೇಷವಾದದ್ದಾಗಿತ್ತು ಏಕೆಂದರೆ ಈ ಕಾರ್ಯಸಾಧನೆಗೆ ನಾನು ವಿಶೇಷ ವಿಧಾನವನ್ನು ಬಳಸಿದ್ದೇನೆ."

ಗುರುಗಳು ಸಾಫಲ್ಯ ಮತ್ತು ವೈಫಲ್ಯಗಳ ಬಗ್ಗೆ ಮಾತನಾಡುತ್ತ ಹೀಗೆಂದರು, "ವೈಫಲ್ಯವು ವ್ಯಕ್ತಿಗೆ ಆರೋಪ್ಯವಾಗುತ್ತದೆ, ಸಾಫಲ್ಯವಲ್ಲ. ನನ್ನ ಮಾರಾಟದ ಪುಸಲಾವಣೆಯಲ್ಲಿ ನಾನು ಸಹಕಾರದ ಬಗ್ಗೆ ಹೇಳುವುದಿತ್ತು, ಕಾರು ಪರಿಪೂರ್ಣವಾಗಿ ಚೆನ್ನಾಗಿ ಕೆಲಸ ಮಾಡುತ್ತಿರುವಾಗ ಅದು ಏಕೆ ಕೆಲಸಮಾಡುತ್ತಿದೆ ಎಂದು ನೀವು ಹೇಳಬಲ್ಲಿರಾ? ಸಾಧ್ಯವಿಲ್ಲ. ಆದರೆ ಅದು ವಿಫಲವಾಗುವಾಗ, ನೀವು ಖಂಡಿತವಾಗಿಯೂ ಅದರ ವೈಫಲ್ಯಕ್ಕೆ ಕಾರಣವೇನೆಂದು ಹೇಳಬಲ್ಲಿರಿ."

### ಆಗಸ್ಟ್ 2013

ಚಾಂದ್ರಮಾನ ಪಂಚಾಂಗದ ಪ್ರಕಾರ ಆಗಸ್ಟ್ 2, ಶುಕ್ರವಾರದಂದು ಗುರುಗಳ ಹುಟ್ಟುಹಬ್ಬವಿದ್ದಿತು. ಕುಟೀರದಲ್ಲಿನ ಸೋದರರೆಲ್ಲರೂ ಧೋತಿ ಮತ್ತು ನೀಲಿ ಅಂಗಿಯನ್ನು ಧರಿಸಿದ್ದರು. ಮುಂಜಾನೆ ಗುರುಗಳು ಪ್ರಸಾದವನ್ನು ವಿತರಿಸಿದರು ಮತ್ತು ಮಧ್ಯಾಹ್ನದ ಭೋಜನಕ್ಕೆ ಸುಮಾರು ಐವತ್ತು ಜನರಿಗೆ ವ್ಯವಸ್ಥೆ ಮಾಡಿದ್ದರು. ಅವರು ಅಂಗಣಕ್ಕೆ ಬಂದು ಎಲ್ಲರೊಡನೆ ಭೋಜನ ಮಾಡಿದರು.

### ಉತ್ತರ ಅಮೇರಿಕಾದ ಪ್ರಶಿಕ್ಷಕರ ಸಭೆ – ಆಗಸ್ಟ್ 8ರಿಂದ 10

8ನೇ ತಾರೀಖಿನಂದು ಬೆಳಿಗ್ಗೆ ಗುರುಗಳು ಅಸ್ವಸ್ಥರಾಗಿದ್ದರಿಂದ, ಪ್ರಶಿಕ್ಷಕರೆಲ್ಲ ಕುಟೀರದ ಹೊರಗೆ ಸೇರಿದ್ದರೂ ಸಹ ಗುರುಗಳು ಅವರೊಂದಿಗೆ ಮಾತನಾಡಲು ಆಗುವುದಿಲ್ಲವೆಂದು ಅವರೆಲ್ಲರೂ ಸಭಾಂಗಣಕ್ಕೆ ತೆರಳಿದರು.

ಆದರೆ ಸಂಜೆ, ಎಲ್ಲರೂ ಆಶ್ಚರ್ಯ ಪಡುವಂತೆ ಗುರುಗಳು ಕುಟೀರದ ಹೊರಬಂದು ಕುಳಿತರು. ಉ.ಅಮೇರಿಕಾದ ಪ್ರಶಿಕ್ಷಕರು ಗುರುಗಳೊಂದಿಗೆ ಸಮಯ ಕಳೆದರು ಮತ್ತು ಗುರುಗಳು ಅವರೊಂದಿಗೆ ಸಂಭಾಷಿಸಿದರು.

ಸೋ. ಸಂತೋಷ್ ಶ್ರೀನಿವಾಸನ್‌ರವರು ಹದಿನಾಲ್ಕು ಆಯೋಜಕರ ತಂಡದೊಡನೆ ಸುಮಾರು 140 ಪ್ರಶಿಕ್ಷಕರಿಗಾಗಿ 'ಪ್ರಶಿಕ್ಷಕರ ಅನುಭವಗಳನ್ನು ಗಾಢಗೊಳಿಸುವುದು' ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಸೋ. ಕಮಲೇಶ್‌ರವರು ಮೂರೂ ದಿನಗಳಂದು ಪ್ರಶಿಕ್ಷರಿಗಾಗಿ ಉಪನ್ಯಾಸಗಳನ್ನು ನೀಡಿದರು. ಸಭೆಯು ಭಾನುವಾರದ ಪ್ರಶ್ನೋತ್ತರ ಕಾರ್ಯಕ್ರಮದ ಮೂಲಕ ಸಮಾಪ್ತಗೊಂಡಿತು.

### ಶುಕ್ರವಾರ, ಆಗಸ್ಟ್ 9, 2013

ಆಶ್ರಮದ ಸಮೀಪ ವಾಸವಾಗಿರುವ ಮುಸ್ಲಿಂ ಕುಟುಂಬದವರು, ಪ್ರತಿ ವರ್ಷ ರಮ್‌ಜ಼ಾನಿನ ಕೊನೆಯ ದಿನವಾದ ಈದ್‌ನಂದು ಗುರುಗಳ ಆಶೀರ್ವಾದ ಪಡೆಯುವ ವಾಡಿಕೆಯಿದೆ. ಗುರುಗಳು ಅವರನ್ನು ಆಹ್ವಾನಿಸಿ, ಮಕ್ಕಳನ್ನು ಕಂಡು, ಅವರಿಗೆ ಮತ್ತು ಉಪಸ್ಥಿತರಿದ್ದವರಿಗೆ ಸಿಹಿ ಮತ್ತು ಪ್ರಸಾದ ನೀಡಿ, ಸತ್ಸಂಗವನ್ನೂ ನಡೆಸಿಕೊಟ್ಟರು.

### ಉತ್ತರ ಅಮೇರಿಕಾ ಸಭೆ – ಆಗಸ್ಟ್ 11ರಿಂದ 17




ಉತ್ತರ ಅಮೇರಿಕಾ ಮತ್ತು ಕೆನಡದ ಅಭ್ಯಾಸಿಗಳು ಗುರುಗಳು ನೀಡಿದ ವಿಷಯವಾದ "ಪೂರ್ವಗ್ರಹವು ಆಧ್ಯಾತ್ಮಿಕ ಪ್ರತಿಯ ಅತಿ ದೊಡ್ಡ ಅಡಚಣೆ"ಯಲ್ಲಿ ತೊಡಗಿಸಿಕೊಂಡು ಆಧ್ಯಾತ್ಮಿಕವಾಗಿ ಮುನ್ನಡೆಯಲು ಒಟ್ಟುಗೂಡಿದ್ದರು. ಗುರುಗಳು ಸೋದರರಾದ ಪಿ.ಆರ್.ಕೃಷ್ಣ, ಕಮಲೇಶ್, ರಾಬ್ ಕ್ಲಿಂಗರ್, ಕಣ್ಣನ್, ವಿನೋದ್ ಮತ್ತು ಸೋ.ಎಲಿಜ಼ಬೆತ್‌ರವರನ್ನು ವಿಶೇಷ ಉಪನ್ಯಾಸಕರಾಗಿ ನೇಮಿಸಿದ್ದರು.

ಸೋ. ಕಮಲೇಶ್‌ರವರು ಆಶ್ರಮದ ಪುಸ್ತಕಗಳನ್ನು ಓದುವುದು ಬಹುಮುಖ್ಯ, ಹಾಗಾಗಿ ಮಧ್ಯಾಹ್ನಗಳಂದು ನಮ್ಮ ಗುರುಗಳ ಕೃತಿಗಳನ್ನು ಓದುವಂತೆ ಸಲಹೆ ನೀಡಿದರು. ನಮ್ಮ ಮಹಾನ್ ಗುರುಪರಂಪರೆಯ ಕೃತಿಗಳ ಹಿನ್ನೆಲೆ ಅಗತ್ಯ








ಸೋ.ಕಮಲೇಶ್‌ರವರು ಆಗಸ್ಟ್ 15ರಂದು ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ ಧ್ವಜಾರೋಹಣ ಮಾಡುತ್ತಿರುವುದು






ಎಂಬುದನ್ನು ಅವರು ವಿವರಿಸಿದರು.

ಸಹಜಮಾರ್ಗ, ಅಧ್ಯಾತ್ಮದ ಪಾತ್ರ, ತಾರುಣ್ಯಾವಸ್ಥೆಯಲ್ಲಿ ಅದರೊಂದಿಗಿನ ಅವರ ಸಂಬಂಧ ಮತ್ತು ಅವರ ಜೀವನದಲ್ಲಿ ಗುರುಗಳು ವಹಿಸುವ ಪಾತ್ರದ ಬಗ್ಗೆ ಚರ್ಚಿಸಲು ಆಸಕ್ತಿಯುಳ್ಳ ಹದಿಹರೆಯದವರಿಗಾಗಿ ತರಬೇತಿ ಕಾರ್ಯಕ್ರಮವನ್ನು ನಡೆಸಲಾಯಿತು.

ಸೋ. ವಿಕ್ಟರ್ ಕಣ್ಣನ್‌ರವರು ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಯು–ಕನೆಕ್ಟ್ (University connect) ಎನ್ನುವ ಕಾರ್ಯಕ್ರಮದ ಪರಿಚಯವನ್ನು ಮಾಡಿಕೊಟ್ಟರು ಹಾಗು ಸೋ ಕೃಷ್ಣ ಲಿಂಗರವರು ಸಹಜಮಾರ್ಗವು ಮುಂದಿನ ಪೀಳಿಗೆಯನ್ನು ಮುಟ್ಟಲು ಸಹಾಯಕವಾಗುವಂತೆ ಉನ್ನತ ಶಿಕ್ಷಣ ಪಡೆದ ಅಭ್ಯಾಸಿಗಳು ಕಾರ್ಯಪ್ರವೃತ್ತರಾಗುವಂತೆ ಕರೆ ನೀಡಿದರು.

ಚೆನ್ನೈಯಲ್ಲಿ ಸಭೆಯ ಪೂರ್ಣಾವಧಿಯಲ್ಲಿಯೂ ಸತತ ಮಳೆಯಾಗುತ್ತಲಿದ್ದು, 16ರಂದು ಬಿಸಿಲು ಕಂಡಿತು. ಪ್ರತಿದಿನ ಸಂಜೆಯ ಸತ್ಸಂಗದ ನಂತರ, ಗುರುಗಳ ಕುಟೀರದ ದ್ವಾರಗಳು ತೆರೆಯುತ್ತಿದ್ದವು. 16ರಂದು, ಎಂಟು ವರ್ಷದ ಒಬ್ಬ ದಿಟ್ಟ ಬಾಲಕನು ಗುರುಗಳನ್ನು ಕೇಳಿದನು, "ಗುರುಗಳೇ, ನಿಮ್ಮೊಳಗೆ ಭಗವಂತನು ಏಕೆ ಅಡಗಿದ್ದಾನೆ, ಅವನೇಕೆ ತನ್ನನ್ನು ತೋರ್ಪಡಿಸುವುದಿಲ್ಲ?" ಗುರುಗಳು ಉತ್ತರಿಸಿದರು, "ಭಗವಂತನು ಅಡಗಿದ್ದಾನೆಂದರೆ ಅದಕ್ಕೊಂದು ಕಾರಣವಿರಲೇಬೇಕು. ಆ ಕಾರಣ ಬಹಿರಂಗವಾದರೆ, ಅವನು ಅಡಗಿದುದರ ಉದ್ದೇಶವೇನುಳಿಯಿತ್ತದೆ?" ಕೇವಲ ಗುರುಗಳು ಮಾತ್ರ ಇಂತಹ ಸುಂದರ ಉತ್ತರವನ್ನು ನೀಡಬಲ್ಲರು.

17ರ ಸಂಜೆ, ಗುರುಗಳು ಮಕ್ಕಳ ದೊಡ್ಡ ಗುಂಪಿನಲ್ಲಿ ಎಲ್ಲರೊಡನೆ ನಗುತ್ತಾ ಕೈ ಮಿಲಾಯಿಸುತ್ತಿದ್ದರು. ಮಕ್ಕಳಿಗೆ ಅವರೊಂದಿಗಿರಲು ಬಹಳ ಸಂತೋಷವಾಗಿದ್ದಿತು. ನಿಧಾನವಾಗಿ, ದೊಡ್ಡವರೂ ಸಹ ಧೈರ್ಯ ಮಾಡಿ ಸಿಹಿ ಮತ್ತು ಉಡುಗೊರೆಗಳೊಂದಿಗೆ ಗುರುಗಳಿಗೆ ಶುಭ ಕೋರಲು ಮುಂದಾದರು. ಗುರುಗಳು ಅಪಾರ ತಾಳ್ಮೆ ಹಾಗು ಶಾಂತಿಯಿಂದ ಪ್ರತಿಯೊಬ್ಬರಿಗೂ ಸಹಕರಿಸಿದರು. ಸಭೆಯ ವಿಷಯವನ್ನು ಮುಂದಿಟ್ಟು ಒಬ್ಬ ಸಹೋದರ ಕೇಳಿದರು, "ಗುರುಗಳೇ, ಪ್ರೇಮವು ಪೂರ್ವಗ್ರಹಕ್ಕೆ ವಿರುದ್ಧವಾದದ್ದೇ?" ಗುರುಗಳು ತತ್‌ಕ್ಷಣವೇ ಉತ್ತರಿಸಿದರು, "ಪ್ರೇಮಕ್ಕೆ ವಿರುದ್ಧವೆಂಬುದು ಏನೂ ಇಲ್ಲ." ಭಗವಂತನಿಗೆ ವಿರುದ್ಧವಿಲ್ಲದಂತೆಯೇ ಪ್ರೇಮಕ್ಕೂ ವಿರುದ್ಧವಿಲ್ಲವೆಂದು ಅವರು ಹೇಳಿದರು.

ಅವರು ಹೇಗಿದ್ದಾರೆಂದು ಕೇಳಿದಾಗ ಅವರು ಉತ್ತರಿಸಿದರು, "ಅಷ್ಟೇನೂ ಚೆನ್ನಾಗಿಲ್ಲ, ಆದರೆ ದೂರುಗಳಿಲ್ಲ." ಅವರು ಮೌನವಾಗಿರುವುದನ್ನು ನೋಡುವುದು ಭಾವನಾತೀತ.

ಸಭೆಯ ಪೂರ್ಣ ಕಾಲಾವಧಿಯಲ್ಲಿ ಗುರುಗಳ ಆರೋಗ್ಯವು ಸರಿಯಿರಲಿಲ್ಲ. ಹಾಗಾಗಿ, ಪೂರ್ವಯೋಜಿತ ಭೇಟಿಗಳು, ಸಭೆಗಳು ಮತ್ತು ಸತ್ಸಂಗಗಳನ್ನು ರದ್ದುಗೊಳಿಸಲಾಯಿತು. ಆದರೆ ಗುರುಗಳ ಸಹಜತೆಗೆ ಪಾರವಿಲ್ಲ. ಅವರ ಆರೋಗ್ಯ ಸುಧಾರಿಸಿದಂತೆಲ್ಲ ಅವರು ಹೊರಬರುವುದು, ಅಭ್ಯಾಸಿಗಳನ್ನು ಭೇಟಿ ಮಾಡುವುದು, ಇತರರ ಉಪನ್ಯಾಸಗಳನ್ನು ಆಲಿಸುವುದರ ಮೂಲಕ ಲಭ್ಯವಾಗಿದ್ದರು. ಅವರು ಹೇಳಿದರು, "ಅಭ್ಯಾಸಿಗಳಿಗೆ ನಾನು ಲಭ್ಯವಾಗುವುದು ಅವರ (ಮೇಲೆ ಬಾಬೂಜಿ ಮಹಾರಾಜರ ಕಡೆ ತೋರಿಸುತ್ತಾ) ಕೈಯಲ್ಲಿದೆ ಹಾಗು ಅದು ಕಡಿಮೆಯಾಗುತ್ತಲಿದೆ. ಯಾವುದೇ ಆಗಲಿ, ಅತಿಯಾದರೆ ಅದಕ್ಕೆ ಮೌಲ್ಯವಿರಲಾರದು. ಆದ್ದರಿಂದ ದೊರೆತ ಅವಕಾಶಗಳ ಪೂರ್ಣ ಲಾಭ ಪಡೆಯಿರೆಂದು ಎಲ್ಲರಿಗೂ ಸಲಹೆ ನೀಡುತ್ತಿದ್ದೇನೆ."






# ಪೂಜ್ಯ ಗುರುಗಳ 87ನೇ ಜನ್ಮದಿನೋತ್ಸವಾಚರಣೆ

ಪೂಜ್ಯ ಗುರುಗಳ 87ನೇ ಜನ್ಮದಿನೋತ್ಸವಾಚರಣೆಯನ್ನು ದೇಶಾದ್ಯಂತ ಪೂರ್ಣದಿನ ಆಚರಿಸಲಾಯಿತು. ಬಹಳಷ್ಟು ಕೇಂದ್ರಗಳಲ್ಲಿ ದಿನವು ಬೆಳಗಿನ ಧ್ಯಾನದಿಂದ ಪ್ರಾರಂಭವಾಗಿ, ನಂತರ ಯುವ ಅಭ್ಯಾಸಿಗಳು ಮತ್ತು ಮಕ್ಕಳ ಕಿರುನಾಟಕಗಳು ಮತ್ತು ನೃತ್ಯಗಳಿಂದ ಕೂಡಿದ ಕಾರ್ಯಕ್ರಮಗಳಿದ್ದವು. ಅಭ್ಯಾಸಿ ಸೋದರ ಸೋದರಿಯರು ಹಾಡಿದ ಭಜನೆಗಳು ಭಕ್ತಿಪರವಶ ವಾತಾವರಣವನ್ನು ಸೃಷ್ಟಿಸಿದವು.

ಪೂಜ್ಯ ಗುರುಗಳನ್ನು ಪರದೆಯ ಮೇಲೆ ಕಂಡೊಡನೆಯೇ ಅಭ್ಯಾಸಿಗಳ ಹೃದಯದಲ್ಲಿ ಆನಂದ ತುಂಬಿತು. ಚೆನ್ನೈನಲ್ಲಿನ ನಡಾವಳಿಗಳನ್ನು ನೇರಪ್ರಸಾರ ಮಾಡಿದ ಕಾರಣ ಗುರುಗಳ ಭೌತಿಕ ಉಪಸ್ಥಿತಿಯನ್ನು ಅನುಭವಿಸಲಾಯಿತು. ಕೆಲವು ಕೇಂದ್ರಗಳಲ್ಲಿ ಕೇಕ್ ಕತ್ತರಿಸಿ ಜನ್ಮದಿನದ ಗೀತೆಯನ್ನು ಹಾಡಲಾಯಿತು. ನಂತರ ವಿಸ್ಪರ್ಸ್‌ನ ಸಂದೇಶ ವಾಚನ ಮತ್ತು ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಹಲವಾರು ಕೇಂದ್ರಗಳಲ್ಲಿ, ಎಂದಿಗಿಂತಲೂ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಅಭ್ಯಾಸಿಗಳು ಸೇರಿದ್ದರು. ಎಲ್ಲಾ ಕೇಂದ್ರಗಳಲ್ಲೂ ಉಪನ್ಯಾಸಗಳು, ಕಿರುನಾಟಕಗಳು, ಸಮೂಹಚರ್ಚೆಗಳು ಸಹಜಮಾರ್ಗದ ವಿವಿಧ ಅಂಶಗಳಾದ ಯುಕ್ತ ನಡತೆ, ಸಮರ್ಪಣೆ, ಶ್ರದ್ಧೆ, ಗುರಿ ಮತ್ತು ಮಾರ್ಗವನ್ನು ಬಿಂಬಿಸಿದವು. ಇನ್ನೂ ಅನೇಕ ಕೇಂದ್ರಗಳಲ್ಲಿ, ಉಪನ್ಯಾಸಗಳು, ಕಿರುನಾಟಕಗಳು ಮತ್ತು ಸಮೂಹಚರ್ಚೆಗಳ ಮೂಲಕ ಗುರುಗಳ ಜೀವನದ ಪ್ರಮುಖ ಘಟನೆಗಳ ಚಿತ್ರಣ ನೀಡಿದರು.

ಸಣ್ಣ ಹಾಗು ದೊಡ್ಡ ಕೇಂದ್ರಗಳೆರಡಲ್ಲೂ, ಅಭ್ಯಾಸಿಗಳ ಯೋಚನೆಗಳು ಗುರಿ ಮುಟ್ಟುವ ಉದ್ದೇಶ, ಮಾರ್ಗ ಮತ್ತು ಮನೋಭಾವದ ಕಡೆ ಒಲಿಯುವಂತೆ ಮಾಡಲು ಸಹಾಯಕವಾಗುವ ಚರ್ಚೆಗಳು ಮತ್ತು ಸ್ಪಂದನಪೂರ್ಣ ವಿಧಿಗಳನ್ನು ನಡೆಸುವ ಸಂಪೂರ್ಣ ಪ್ರಯತ್ನವಿದ್ದಿತು. ಭಾರತದ ಎಲ್ಲಾ ಕೇಂದ್ರಗಳಲ್ಲೂ, ಆ ದಿನವನ್ನು ಆತ್ಮವಿಮರ್ಶೆಯಲ್ಲಿ ಕಳೆಯುವುದರೊಂದಿಗೆ, ಭಕ್ತಿ, ಪ್ರೇಮ ಮತ್ತು ಆನಂದದಿಂದ ಆಚರಿಸಲಾಯಿತು.


Ahmednagar


Nagpur


Gondia


Solapur


Bhilwara


Jodhpur


Jaipur


Phulgaon


Madurai


Kolkata


Ranchi


Chikali






## ಪಂಜಾಬ್‌ನ ಲುಧಿಯಾನದ ಮೊದಲ ಆಶ್ರಮ

ಲುಧಿಯಾನ–ಪಖೋವಲ್ ರಸ್ತೆಯಲ್ಲಿ ನಿರ್ಮಿತ ಆಶ್ರಮವು, ಲುಧಿಯಾನ ರೈಲ್ವೆ ನಿಲ್ದಾಣದಿಂದ ಹತ್ತು ಕಿ.ಮೀ ಮತ್ತು ಬಸ್ ನಿಲ್ದಾಣದಿಂದ ಆರು ಕಿ.ಮೀ. ದೂರದಲ್ಲಿದೆ. ಇದರ ನಿರ್ಮಿತಿ ವಿಸ್ತೀರ್ಣವು 2000ಚ.ಯಾರ್ಡಗಳಿದ್ದು, ಗುರುಗಳ ಕೋಣೆ, ಧ್ಯಾನಮಂದಿರ, ವಸತಿಕೋಣೆಗಳು, ಮಕ್ಕಳ ಕೇಂದ್ರ, ಕಛೇರಿ, ಪಾಕಶಾಲೆ ಮತ್ತು ಶೌಚಾಲಯಗಳನ್ನು ಒಳಗೊಂಡ ಮೂರು ಎರಡಂತಸ್ತಿನ ಕಟ್ಟಡಗಳಿವೆ. ಧ್ಯಾನಮಂದಿರದಲ್ಲಿ 350 ಜನರು ಕುಳಿತುಕೊಳುವ ವ್ಯವಸ್ಥೆಯಿದೆ. ಈ ಆಶ್ರಮದಲಿ ್ಲ ಅಮೇರಿಕಾದಲ್ಲಿ ವಿಶೇಷವಾಗಿ ವಿನ್ಯಾಸಗೊಳಿಸಿ ಗುರುಗಳ ಅನುಮತಿ ಪಡೆದ ಘಂಟೆಯಿದೆ.

ಜುಲೈ 22, ಗುರುಪೂರ್ಣಿಮೆಯಂದು, ಸುಮಾರು 300 ಅಭ್ಯಾಸಿಗಳ ಉಪಸ್ಥಿತಿಯಲ್ಲಿ ಈ ಆಶ್ರಮದ ಉದ್ಘಾಟನೆಯನ್ನು ವಲಯ ಪ್ರಮುಖರಾದ ನಿ. ಮೇಜರ್ ಜನರಲ್ ಹರಭಜನ್ ಸಿಂಗ್‌ರವರು ನೆರವೇರಿಸಿದರು. ಗುರುಗಳು ವಿಡಿಯೊ ಸಂಭಾಷಣೆಯ ಮೂಲಕ ಆಶ್ರಮವನ್ನು ತೆರೆಯಲಾಗಿದೆಯೆಂದೂ, ಎಲ್ಲ ಅಭ್ಯಾಸಿಗಳೂ ತಮ್ಮ ಆಧ್ಯಾತ್ಮಿಕ ಪ್ರಗತಿಗಾಗಿ ಇದರ ಸಂಪೂರ್ಣ ಲಾಭ ಪಡೆಯಬೇಕೆಂದೂ ಘೋಷಿಸಿದರು. ಸೋ. ಹರಭಜನ್‌ಸಿಂಗ್‌ರವರು ಸತ್ಸಂಗವನ್ನು ನಡೆಸಿ ನಂತರ ನೆರೆದ ಅಭ್ಯಾಸಿಗಳನ್ನು ಉದ್ದೇಶಿಸಿ ಮಾತನಾಡಿದರು. ಕೇಂದ್ರ ಮುಖ್ಯಸ್ಥರಾದ ಸೋ. ರಮಣ್ ಕಪೂರ್‌ರವರು ಎಲ್ಲಾ ಅಭ್ಯಾಸಿಗಳು ಮತ್ತು ಸ್ವಯಂಸೇವಕರಿಗೆ ಧನ್ಯವಾದಗಳನ್ನರ್ಪಿಸಿದರು. ವಾತಾವರಣದಲ್ಲಿ ಶಕ್ತಿಚಲನೆಯಿದ್ದು, ಎಲ್ಲ ಅಭ್ಯಾಸಿಗಳೂ ಗುರುಗಳ ಉಪಸ್ಥಿತಿಯನ್ನು ಅನುಭವಿಸಿದರು.

## ಮನಮದುರೈ, ತಮಿಳುನಾಡು

ಶಿವಗಂಗೈ ಜಿಲ್ಲೆಯ ಮನಮದುರೈ ಕೇಂದ್ರವು ಅನೇಕ ವರ್ಷಗಳಿಂದ ಪ್ರಶಿಕ್ಷಕರಾದ ಸೋ. ರಾಧಾಕೃಷ್ಣನ್‌ರವರ ಮನೆಯಲ್ಲಿ ನೆಲೆಗೊಂಡಿತ್ತು. ಇತ್ತೀಚೆಗೆ, ಸೋ. ನಿತ್ಯಾನಂದಂರವರು 33ಸೆಂಟ್‌ಗಳಷ್ಟು ಭೂಮಿಯನ್ನು ದೇಣಿಗೆ ನೀಡಿದ್ದರಿಂದ, ಅದರಲ್ಲಿ 2400 ಚ.ಅಡಿಯ ಧ್ಯಾನಮಂದಿರ, ಪಾಕಶಾಲೆ, ಶೌಚಾಲಯ ಮತ್ತು ಕಛೇರಿಯನ್ನು ನಿರ್ಮಿಸಲಾಯಿತು. ಗುರುಗಳ ಅನುಮತಿಯೊಂದಿಗೆ, ಮೊದಲ ಸತ್ಸಂಗವನ್ನು ಜೂನ್ 20ರಂದು ವಲಯ ಮುಖ್ಯಸ್ಥರಾದ ಸೋ. ಟಿ.ವಿ.ವಿಶ್ವನಾಥ ರಾವ್‌ರವರು ನಡೆಸಿಕೊಟ್ಟರು. ಹತ್ತಿರದ ಕೇಂದ್ರಗಳಿಂದ ಸುಮಾರು 200 ಅಭ್ಯಾಸಿಗಳು ಸತ್ಸಂಗದಲ್ಲಿ ಪಾಲ್ಗೊಂಡು, ಸಂಜೆಯ ಸತ್ಸಂಗದವರೆಗೂ ಉಳಿದುಕೊಂಡರು.

## ವಡಕಾಂಗುಲಂ, ತಮಿಳುನಾಡು

ವಡಕಾಂಗುಲಂ, ತಿರುನಲ್ವೇಲಿ, ತೂತ್ತುಕುಡಿ ಮತ್ತು ಕನ್ಯಾಕುಮಾರಿಯಿಂದ ಸುಮಾರು 300 ಅಭ್ಯಾಸಿಗಳು ವಡಕಾಂಗುಲಂ ಕೇಂದ್ರದಲ್ಲಿ ಪೂಜ್ಯ ಗುರುಗಳ ಹುಟ್ಟುಹಬ್ಬವನ್ನು ಮತ್ತು ನವನಿರ್ಮಿತ ಗುರುಗಳ ಕುಟೀರದ ಉದ್ಘಾಟನೆಗಾಗಿ ಒಟ್ಟುಸೇರಿದ್ದರು. ಅರೆಶಾಶ್ವತ ಧ್ಯಾನಮಂದಿರ, ಶೌಚಾಲಯಗಳು ಮತ್ತು ಹುಲ್ಲುಹೊದಿಕೆಯ ಪಾಕಶಾಲೆಯ ಜೊತೆಗೆ ಗುರುಗಳ ಕುಟೀರ ಮತ್ತು ವಸತಿ ಮತ್ತು ಅಭ್ಯಾಸಿಗಳಿಗಾಗಿ ತರಗತಿ ಕೋಣೆಗಳೊಂದಿಗೆ, ಆಶ್ರಮದ ರಚನೆಯು ಸಂಪೂರ್ಣವಾಗಿದೆ. 8.30ಕ್ಕೆ ಕುಟೀರದ ಫಲಕವನ್ನು ಅನಾವರಣಗೊಳಿಸಲಾಗಿ, 9.00 ಘಂಟೆಗೆ ಸೋ. ಎ.ಪಿದೊರೈರವರಿಂದ ಸತ್ಸಂಗ ನಡೆಯಿತು. ನಂತರ, ದೈವಿಕತೆಯ ಉಪಸ್ಥಿತಿಯನ್ನು ಕೇವಲ ಆಶ್ರಮಕ್ಕಷ್ಟೇ ಸೀಮಿತಗೊಳಿಸದೆ ಎಲ್ಲೆಡೆಗೂ ಅನುಭವಿಸಬೇಕು ಎಂದು ಗುರುಗಳು ನೀಡಿದ ಉಪನ್ಯಾಸದ ಭಾಗವನ್ನು ಓದಲಾಯಿತು. ತದನಂತರ, ಅಭ್ಯಾಸಿಗಳ ಆಶುಭಾಷಣ, ಸಮೂಹಚರ್ಚೆಗಳು, ಆಶ್ರಮದ ಇತಿಹಾಸದ ವಿಡಿಯೋ ಮತ್ತು ಗುರುಪೂರ್ಣಿಮೆಯಂದು ಗುರುಗಳು ನೀಡಿದ ಉಪನ್ಯಾಸಗಳಿದ್ದವು. ಸಹಜಮಾರ್ಗದ ಮೇಲಿನ ಪ್ರಶ್ನೋತ್ತರದ ನಂತರ ಸತ್ಸಂಗದೊಡನೆ ಕಾರ್ಯಕ್ರಮವು ಸಮಾಪ್ತಗೊಂಡಿತು.

## ಪಯ್ಯನೂರು, ಕೇರಳ

ಗುರುಗಳ ಆಣತಿಯಂತೆ, ವಲಯ ಪ್ರಮುಖರಾದ ಸೋ.ಕೆ.ಯು. ಮೋಹನ್‌ರವರು ಜುಲೈ 22ರ ಗುರುಪೂರ್ಣಿಮೆಯಂದು ಧ್ಯಾನಮಂದಿರದ ಅಡಿಗಲ್ಲು ಸ್ಥಾಪಿಸಿದರು. ಸತ್ಸಂಗದೊಡನೆ ಪ್ರಾರಂಭವಾಗಿ, ಅಡಿಗಲ್ಲು ಸ್ಥಾಪನೆಯಾಗುವ ಕಾರ್ಯಕ್ರಮದಲ್ಲಿಅರವತ್ತೈದು ಅಭ್ಯಾಸಿಗಳು ಭಾಗವಹಿಸಿದರು. ನಂತರ, ಕೆಲವು ಸಸಿಗಳನ್ನು ನೆಡಲಾಯಿತು. ಉಪಾಹಾರದ ನಂತರ, ಅಭ್ಯಾಸಿಗಳು ಧ್ಯಾನಮಂದಿರದಲ್ಲಿ ಚರ್ಚೆಗಾಗಿ ಪುನಃ ಸೇರಿದರು. ಕೇಂದ್ರಪ್ರಮುಖರಾದ ಸೋ. ಟಿ.ವಿ. ಕುನ್ನಿ ಕಣ್ಣನ್‌ರವರು ತಮ್ಮ ಸ್ವಾಗತ ಭಾಷಣದಲ್ಲಿ, ಅಂದು ಸ್ಥಾಪಿಸಿದ ಅಡಿಗಲ್ಲು ಪಯ್ಯನೂರು ಆಶ್ರಮದ ಪ್ರಗತಿಪಥದಲ್ಲಿ ಒಂದು ಮೈಲಿಗಲ್ಲು ಎಂದರು. ಮುಂದೆ ನಡೆಯಲಿರುವ ನಿರ್ಮಾಣ ಕಾರ್ಯದಲ್ಲಿ ಪ್ರತಿಯೊಬ್ಬ ಅಭ್ಯಾಸಿಯೂ ತುಂಬುಹೃದಯದ ಸಹಕಾರ ನೀಡಬೇಕೆಂದು ಕೋರಿದರು. ಸೇವೆಯ ಮೂಲಕ ಮುನ್ನಡೆಯಲು ಗುರುಗಳು ನೀಡಿದ ಸುವರ್ಣಾವಕಾಶವಿದು ಎಂದು ಅವರು ಹೇಳಿದರು.





## ಒಂದು ಕೇಂದ್ರದ ವಿಕಾಸ – ಜವೋರ, ಮಧ್ಯಪ್ರದೇಶ



ಮಧ್ಯಪ್ರದೇಶದ ರತ್ಲಾಮ್ ಹತ್ತಿರದ ಜವೋರ ಕೇಂದ್ರದಲ್ಲಿ ಕಳೆದ ಹಲವು ವರ್ಷಗಳಿಂದ ಕೇವಲ 10 ಮಂದಿ ನಿಯತವಾಗಿ ಸಾಧನೆಮಾಡುವ ಅಭ್ಯಾಸಿಗಳಿದ್ದರು. ಜುಲೈ 12 ರಂದು ಸೋ. ರುಚಿಯವರ ಕ್ರಮದಿಂದಾಗಿ ಒಂದು ಬಹಿರಂಗ ಸಭೆ ಆಯೋಜಿಸಲ್ಪಟ್ಟು 75 ಆಕಾಂಕ್ಷಿಗಳು ಸಹಜಮಾರ್ಗಕ್ಕೆ ಸೇರ್ಪಡೆಯಾದರು. ಜುಲೈ 24ರಂದು ಗುರುಗಳ ಜನ್ಮದಿನೋತ್ಸವವನ್ನು ಈ ಹೊಸ ಅಭ್ಯಾಸಿಗಳೊಡನೆ ಜವೋರದಲ್ಲಿ ಆಚರಿಸಲಾಯಿತು. ನಂತರ ವಲಯಾದಿ ಕಾರಿಗಳಾದ ಸೋ. ಪ್ರಭಾಕರ್ ದಾಸ್‌ರವರು ಆಗಸ್ಟ್ 3 ಮತ್ತು 4 ರಂದು ಒಂದು ಪೂರ್ಣದಿನದ ಕಾರ್ಯಕ್ರಮಕ್ಕೆ ಹಲವು ಪ್ರಶಿಕ್ಷಕರು ಮತ್ತು ಅಭ್ಯಾಸಿಗಳೊಡನೆ ಜವೋರ ಮತ್ತು ರತ್ಲಾಂಗೆ ಭೇಟಿ ನೀಡಿದರು. ಜವೋರದ 65 ಹೊಸ ಅಭ್ಯಾಸಿಗಳು, ರತ್ಲಾಮ್ ಮತ್ತು ಮನ್ಸೌರ್‌ನ ಅಭ್ಯಾಸಿಗಳೊಂದಿಗೆ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಸೋ. ಪ್ರಭಾಕರ್ ದಾಸ್‌ರವರ ನಿರೂಪಣೆ, ಭಾಷಣ, ಪ್ರಶ್ನೋತ್ತರ ಕಾರ್ಯಕ್ರಮ ಹಾಗು ಪ್ರಶಿಕ್ಷಕರೊಡನೆ ಅನೌಪಚಾರಿಕ ಸಂಭಾಷಣೆಗಳಿಂದ ಅಭ್ಯಾಸಿಗಳಿಗೆ ತಮ್ಮ ಎಲ್ಲ ಅನುಮಾನಗಳನ್ನು ಬಗೆಹರಿಸಿಕೊಳ್ಳಲು ಅವಕಾಶ ದೊರೆಯಿತು.

ಆಗಸ್ಟ್ 9 ಮತ್ತು 10 ರಂದು 26 ಆಕಾಂಕ್ಷಿಗಳು ಮಿಷನ್ನಿಗೆ ಸೇರ್ಪಡೆಯಾದರು. ಹೀಗಾಗಿ, ದಶಕಗಳಿಂದ ಒಂದು ಡಜ಼ನ್‌ಗಿಂತಲೂ ಕಡಿಮೆ ಅಭ್ಯಾಸಿಗಳಿದ್ದ ಕೇಂದ್ರವೊಂದು, ಕೇವಲ ಒಂದು ತಿಂಗಳ ಅವಧಿಯಲ್ಲಿ, ಸಹಜಮಾರ್ಗವನ್ನು ಜೀವನಮಾರ್ಗವಾಗಿ ಆರಿಸಿಕೊಂಡ 112 ಉತ್ಸಾಹಿ ಅಭ್ಯಾಸಿಗಳುಳ್ಳ ಕೇಂದ್ರವಾಗಿದೆ. ಈ ಸಾಧನೆಗೆ, ಸಮೀಪ ಕೇಂದ್ರಗಳ ಸಹಯೋಜಕರು ಮತ್ತು ಪ್ರಶಿಕ್ಷಕರ ಭ್ರಾತೃತ್ವ ಹಾಗು ಒಗ್ಗಟ್ಟಿನ ಪ್ರದರ್ಶನ ಆದರ್ಶಪ್ರಾಯವಾಗಿದ್ದಿತು.

## ಪರಮಕುಡಿ, ತಮಿಳುನಾಡು

ಜುಲೈ 6 ಮತ್ತು 7ರಂದು ಪ್ರಶಿಕ್ಷಕ ಸೋ. ಅರುಣಾಚಲಂ (ಚೆನ್ನೈ) ಸೇರಿದಂತೆ 14 ಅಭ್ಯಾಸಿಗಳ ಗುಂಪೊಂದು ಪರಮಕುಡಿ ಮತ್ತು ಮನಮದುರೈ ಕೇಂದ್ರಗಳಿಗೆ ಭೇಟಿಕೊಟ್ಟಿತು. ಜುಲೈ 6ರಂದು ಪರಮಕುಡಿಯಲ್ಲಿ 11.30ರ ಸತ್ಸಂಗದೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. 25 ಮಂದಿ ಸ್ಥಳೀಯ ಅಭ್ಯಾಸಿಗಳು ಪಾಲ್ಗೊಂಡಿದ್ದರು.

ಮಧ್ಯಾಹ್ನದ ಊಟದ ನಂತರ, ಎಲ್ಲ ಅಭ್ಯಾಸಿಗಳು, ಹೊಸದಾಗಿ ಉದ್ಘಾಟನೆಯಾಗಿದ್ದ ಮನಮಧುರೈಯ ಧ್ಯಾನಮಂದಿರಕ್ಕೆ ಹೊರಟರು. ಇವರನ್ನು ಕೇಂದ್ರದ ಮುಖ್ಯಸ್ಥರಾದ ಸೋ. ರಾಧಾಕೃಷ್ಣನ್ ಮತ್ತು ಅಲ್ಲಿ ನೆರೆದಿದ್ದ 70 ಮಂದಿ ಅಭ್ಯಾಸಿಗಳು ಸ್ವಾಗತಿಸಿದರು. ನಿಗದಿತ ವಿಷಯಗಳ ಮೇಲೆ ಎಲ್ಲರೂ ಒಟ್ಟಾಗಿ ಉತ್ಸಾಹದಿಂದ ಚರ್ಚೆ ನಡೆಸಿದರು. ನಂತರ ಸಂಜೆ 7.30ಕ್ಕೆ ಸತ್ಸಂಗ ನಡೆಯಿತು. ರಾತ್ರಿ ಅಭ್ಯಾಸಿಗಳು ಪರಮಕುಡಿಗೆ ಹಿಂತಿರುಗಿದರು.

ಭಾನುವಾರ, ಏಳುಮಂದಿ ಪ್ರಶಿಕ್ಷಕರುಗಳನ್ನೊಳಗೊಂಡಂತೆ ಪರಮಕುಡಿ, ರಾಮನಾಥಪುರಂ, ಸಿಂಗಂಪುನರಿ, ಮಧುರೈ, ಶಿವಗಂಗೈ, ಮನಮದುರೈ ಮತ್ತು



ಚೆನ್ನೈಯ 60 ಅಭ್ಯಾಸಿಗಳಿದ್ದರು. ಸಹಜಮಾರ್ಗದ ಮೂಲಭೂತ ಅಂಶಗಳ ಬಗ್ಗೆ ಪ್ರಶ್ನೋತ್ತರ, ಗುರುಗಳು, ಸಂಸ್ಥೆ ಹಾಗು ಪದ್ಧತಿಯ ಬಗ್ಗೆ ರಸಪ್ರಶ್ನೆ ಕಾರ್ಯಕ್ರಮಗಳಲ್ಲಿ ಅಭ್ಯಾಸಿಗಳು ಉತ್ಸಾಹದಿಂದ ಪಾಲ್ಗೊಂಡರು. ಇದು ಸಂಯೋಜಕರಿಗೆ ನಿಜವಾಗಿಯೂ ಪ್ರೋತ್ಸಾಹದಾಯಕವಾಗಿತ್ತು. ಆ ದಿನ 3 ಸತ್ಸಂಗಗಳನ್ನು ನಡೆಸಲಾಯಿತು. ಎಲ್ಲ ಕಾರ್ಯಕಲಾಪಗಳನ್ನು ಸೋ. ಅರುಣಾಚಲಂರವರು ಆಯೋಜಿಸಿ ನಡೆಸಿಕೊಟ್ಟರು. ಅಭ್ಯಾಸಿಗಳಿಗೆ ಸಹಜಮಾರ್ಗದ ಬಗ್ಗೆ ಹೆಚ್ಚಿನ ತಿಳಿವಳಿಕೆಗಾಗಿ ಈ ಸಮಾವೇಶಗಳು ಉಪಯುಕ್ತವಾಗಿದ್ದವು.

## ಬನಶಂಕರಿ, ಬೆಂಗಳೂರು

'ಮನನ – ಸಾಧನೆಯ ಚಿಂತನಾ ಶಿಬಿರ' ಎಂಬ ಕನ್ನಡದಲ್ಲಿನ ಕಾರ್ಯಕ್ರಮವನ್ನು ಎರಡು ಗುಂಪುಗಳಲ್ಲಿ ಜುಲೈ 13–14 ಮತ್ತು ಆಗಸ್ಟ್ 3–4ರಂದು ಆಯೋಜಿಸಲಾಗಿತ್ತು. ಸುಮಾರು 110 ಅಭ್ಯಾಸಿಗಳು ಪಾಲ್ಗೊಂಡಿದ್ದರು. ಸೋ. ಶ್ರೀನಿವಾಸರವರ ವಿನ್ಯಾಸ ಮತ್ತು ಸಂಯೋಜನೆಯ ಜೊತೆಗೆ, ಸೋ. ವಸಂತಕುಮಾರಿ, ಸೋ. ಡಾ. ಕೃಷ್ಣಮೂರ್ತಿ ಮತ್ತು ಸೋ. ಬಿ.ಜಿ. ಸುಬ್ರಹ್ಮಣ್ಯರವರೊಡನೆ ಕಾರ್ಯಕ್ರಮದಲ್ಲಿ ಸಾಧನೆಯ ಮೂಲಭೂತ ಅಂಶಗಳನ್ನು ವಿವರವಾಗಿ ತಿಳಿಸಿಕೊಟ್ಟರು. ಸಾಧನೆಯ ಸೂಕ್ಷ್ಮ ಅಂಶಗಳನ್ನು ಹೊರತರಲು ಗುಂಪುಗಳಲ್ಲಿ ಚರ್ಚಿಸಿ ತಮ್ಮ ವಿಚಾರಗಳನ್ನು ಮಂಡಿಸಲು ಅಭ್ಯಾಸಿಗಳಿಗೆ ವಿಷಯಗಳನ್ನು ಕೆಲವು ಪ್ರಶ್ನೆಗಳೊಡನೆ ಕೊಡಲಾಗಿತ್ತು. ಸಂಯೋಜಕರಿಂದ ವಿವರಣೆಗಳು ವಿಶದೀಕರಣ ಮತ್ತು ಗುರುಗಳ ಉಲ್ಲೇಖಗಳೊಂದಿಗೆ ಪ್ರಶ್ನೋತ್ತರ ಕಾರ್ಯಕ್ರಮವು ಅಭ್ಯಾಸಿಗಳ ಅನುಮಾನಗಳನ್ನು ತೊಡೆದುಹಾಕಲು ಸಹಾಯಕವಾಯಿತು. ಅಭ್ಯಾಸಿಗಳ ಅನಿಸಿಕೆಗಳು ಪ್ರೋತ್ಸಾಹದಾಯಕವಾಗಿದ್ದು ಉತ್ಕಟೇಚ್ಛೆಯೊಂದಿಗೆ ಆಧ್ಯಾತ್ಮಿಕ ಪ್ರಗತಿಯನ್ನು ತ್ವರಿತಗೊಳಿಸಲು ಸಹ ಕಾರ್ಯಕ್ರಮ ನೆರವಾಯಿತು.



# ಯುವ ಕಾರ್ಯಕ್ರಮಗಳು

## ಮುಂಬೈ, ಮಹಾರಾಷ್ಟ್ರ

ಆಗಸ್ಟ್ 3, 2013ರಂದು ಹೊಸದಾಗಿ ಸಿದ್ಧಗೊಂಡ ತರಬೇತಿ ಕೊಠಡಿಯಲ್ಲಿ, ಸೋ. ಮೋಹನ್‌ದಾಸ್ ಹೆಗಡೆಯವರು ಆಯೋಜಿಸಿದ 'ನಿಮ್ಮ ಸಹಜಮಾರ್ಗದಲ್ಲಿನ ಆಸಕ್ತಿಯನ್ನು ಉತ್ಸಾಹದಿಂದ ಪುನಃ ಕರೆತನ್ನಿ' ಎಂಬ ಕಾರ್ಯಕ್ರಮದಲ್ಲಿ ಮುಂಬೈ ಮತ್ತು ಪುಣೆಯ ಅರವತ್ತಮೂರು ಯುವ ಅಭ್ಯಾಸಿಗಳು ಪಾಲ್ಗೊಂಡರು.

ಪರಿಚಯದ ನಂತರ, ಅವರನ್ನು ತಮ್ಮ ಒಂದು ಸಂಕಲ್ಪವನ್ನು ದಿನಚರಿಯಲ್ಲಿ ಬರೆಯಲು ಹಾಗು ಅಂದಿನ ಕಾರ್ಯಕ್ರಮದಿಂದ ಅವರಿಗೆ ಸಿಗುವ ಮಾಹಿತಿಯಿಂದ ಅದನ್ನು ಪೂರೈಸುವಂತೆ ತಿಳಿಸಲಾಯಿತು. ನಂತರ, 'ಸಮತೋಲಿತ ಜೀವನದ ಅಗತ್ಯ'ದ ಬಗ್ಗೆ ಪ್ರಸ್ತುತಿ, 'ದೈನಂದಿನ ಸಾಧನೆಯಲ್ಲಿ ಆಸಕ್ತಿ ಬೆಳೆಸಿಕೊಳ್ಳಿ' ಹಾಗು 'ಮುದ್ರಾರಹಿತ ಜೀವನವನ್ನು ನಡೆಸುವುದು ಹೇಗೆ' ಎಂಬ ವಿಷಯಗಳ ಬಗ್ಗೆ ಸಮೂಹಚರ್ಚೆಗಳನ್ನು ನಡೆಸಲಾಯಿತು. ಈ ಚರ್ಚೆಗಳಿಂದ ಅವರು ತಮ್ಮ ದಿನನಿತ್ಯದ ಜೀವನದ ಸಾಧನೆಯಲ್ಲಿ ಆಸಕ್ತಿ ತಳೆಯುವಂತಹ ಅನೇಕ ವಿಚಾರಗಳು ಹೊರಬಂದವು. ಸೋ. ಹೆಗಡೆಯವರು ಸಹಜಮಾರ್ಗ ಸಾಧನೆಯ ಉದ್ದೇಶಗಳೊಂದಿಗೆ ಕಾರ್ಯಕ್ರಮವನ್ನು ಸಮಾಪ್ತಗೊಳಿಸಿ ನಂತರ ಸಂಜೆಯ ಸತ್ಸಂಗ ನಡೆಸಿದರು.

ಪ್ರದರ್ಶನದ ನಂತರ, ಬಾಬೂಜಿಯವರ 'ಶಿಸ್ತು ಪಾಲಿಸುವವ ಮಾತ್ರ ನಿಜವಾದ ಶಿಷ್ಯ' ಹೇಳಿಕೆಯ ಮೇಲೆ ಚರ್ಚೆ ನಡೆಸಿದರು. ದೈನಂದಿನ ಸಾಧನೆ ಮತ್ತು ಹತ್ತು ನಿಯಮಗಳನ್ನು ನಿಯಮಿತವಾಗಿ ಪಾಲಿಸುವುದರಿಂದ ಓರ್ವನು ಸ್ವಯಂಶಿಸ್ತು ಸಾಧಿಸಿ, ಜೀವನದ ನಿಜವಾದ ಗುರಿಯನ್ನು ಪಡೆಯಬಹುದು ಎಂದು ತೀರ್ಮಾನಿಸಲಾಯಿತು.

## ಕೋಲ್ಕಾತಾ, ಪಶ್ಚಿಮ ಬಂಗಾಳ

ಕೋಲ್ಕಾತಾ ಮತ್ತು ಸಮೀಪದ ಕೇಂದ್ರಗಳಾದ ರಾಣಿಗಂಜ್, ಅಸನ್ಸೋಲ್, ಝಾರ್‌ಘ್ರಾಂ ಮತ್ತು ದುರ್ಗಾಪುರಗಳಿಂದ ಸುಮಾರು ನಲವತ್ತು ಅಭ್ಯಾಸಿಗಳು ಕೊಲ್ಕಾತಾದ ಬಾಬೂಜಿ ಮೆಮೋರಿಯಲ್ ಆಶ್ರಮದಲ್ಲಿ ಎರಡು ದಿನದ ಯುವ ಸಭೆಯಲ್ಲಿ ಪಾಲ್ಗೊಂಡರು. ಕಾರ್ಯಕ್ರಮವು ಸಂಜೆಯ ಸತ್ಸಂಗದೊಡನೆ ಪ್ರಾರಂಭವಾಗಿ, ನಂತರ 'ಮುಂದೆ ಸಾಗಲಿ' ಎಂಬ ಮಂತ್ರವಾಧಾರಿತ ಪರಿಚಯಾತ್ಮಕ ಕಾರ್ಯಕ್ರಮವಿದ್ದಿತು. 'ಒಳಗೂ-ಹೊರಗೂ ಸಮತೋಲನ'ದ ಭಾಗವಾಗಿ ಹತ್ತು ನಿಯಮಗಳ ವಿಷಯಗಳನ್ನು ನಟಿಸಿದ್ದರಿಂದ ಗುಂಪಿನಲಿ ್ಲದ್ದವರೆಲ್ಲ ನಿಯಮಗಳನ್ನು ಪಾಲಿಸಲು ಪ್ರೇರಣೆ ಪಡೆದರು. ಮರುದಿನ ಮುಂಜಾನೆ, ಕೇಳಿದ್ದನ್ನು ಅರಗಿಸಿಕೊಳ್ಳಲು ಮಧ್ಯದಲ್ಲಿ ಕೊಂಚ ಸಮಯಾವಧಿ ನೀಡುತ್ತಾ ಸಾಧನೆಯ ಪ್ರಮುಖ ಅಂಶಗಳನ್ನು ಹೊಂದಿದ ಗುರುಗಳ ಉಪನ್ಯಾಸಗಳ ತುಣುಕುಗಳನ್ನು ಕೇಳಿಸಲಾಯಿತು. ಕೊಳವೆ ಮತ್ತು ಗೋಲಿಗಳ ಓಟದಿಂದ ನಮ್ಮ ಜೀವನದಲ್ಲಿ ಸಮತೋಲನದ ಮಹತ್ವ ತೋರಿಸಲಾಯಿತು





ಮತ್ತು 'ಎರಡು ನಿಮಿಷ ಮಾತ್ರ'ದಲ್ಲಿ ಅಭ್ಯಾಸಿಗಳಿಗೆ ಕೊಡಲಾದ ವಿಷಯದ ಬಗ್ಗೆ ಎರಡು ನಿಮಿಷಗಳ ಕಾಲ ಮಾತನಾಡುವುದಿತ್ತು. ಸಂಜೆಯ ಸತ್ಸಂಗ, ನಂತರ ಅನಿಸಿಕೆ ಹೇಳಿಕೆಯೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.

## ಭಿಲ್ವಾರ, ರಾಜಸ್ಥಾನ

ಜುಲೈ 28, 2013ರಂದು ಹದಿನೈದು ಅಭ್ಯಾಸಿಗಳು ಯುವಸಭೆಯಲ್ಲಿ ಪಾಲ್ಗೊಂಡರು. ಕಾಯಕವೇ ಕೈಲಾಸವಾಗಲು ನಮ್ಮ ದಿನನಿತ್ಯದ ಕೆಲಸಗಳನ್ನು ಗುರುಗಳ ಸ್ಮರಣೆಯಲ್ಲಿ ಹೇಗೆ ಮಾಡುವುದೆಂಬುದನ್ನು ಚರ್ಚಿಸಿದರು. ಕೆಲವು ಅಭ್ಯಾಸಿಗಳು ತಮ್ಮ ಅನುಭವಗಳನ್ನು ಹಂಚಿಕೊಂಡರು. ಮಿಷನ್ನಿನ ಪುಸ್ತಕಗಳಿಂದಾಯ್ದ ಈ ವಿಷಯಸಂಬಂಧಿ ಹೇಳಿಕೆಗಳನ್ನು ಓದಿ ಹೇಳಿ, ಮುಂದಿನ ಸಭೆಯ ತನಕ ಎಲ್ಲರೂ ನಿರಂತರ ಸ್ಮರಣೆಯ ಸಾಧನೆ ಮಾಡಬೇಕು ಹಾಗು ಅಂದು ತಮ್ಮ ಅನುಭವಗಳನ್ನು ಹಂಚಿಕೊಳ್ಳಬೇಕೆಂದು ಯೋಜಿಸಲಾಯಿತು.

## ಶ್ರೀಗಂಗಾನಗರ್, ರಾಜಸ್ಥಾನ

'ಸ್ವಯಂಶಿಸ್ತು' ವಿಷಯಾಧಾರಿತ ಸಭೆಯಲ್ಲಿ ಹದಿನೈದು ಅಭ್ಯಾಸಿಗಳು ಭಾಗವಹಿಸಿದರು. ವಿಡಿಯೋ



## ಮುಂಬೈ-ಅಲಿಬಾಗ್‌ನ ಪ್ರವಾಸ

ಜೂನ್ 15ರಂದು, ನಲವತ್ತೈದು ತರುಣರು ಮತ್ತು ಕೆಲವು ಪ್ರಶಿಕ್ಷಕರು ಪನ್ವೇಲ್ ಆಶ್ರಮದಿಂದ ಅಲಿಬಾಗ್‌ನೆಡೆ ಪ್ರಯಾಣ ಮಾಡಿದರು. ಒಬ್ಬರನ್ನೊಬ್ಬರು ಅರಿತುಕೊಳ್ಳುವುದು ಮತ್ತು ಗುರುಗಳ ಸ್ಮರಣೆಯಲ್ಲಿ ಸಮಯ ಕಳೆಯುವುದೇ ಈ ಪ್ರವಾಸದ ಉದ್ದೇಶವಾಗಿತ್ತು. ಸ್ಥಳ ಸೇರಿದೊಡನೆಯೇ ಗುರುಗಳ ಉಪನ್ಯಾಸ ಕೇಳಿಸಿದ ನಂತರ ಹತ್ತು ನಿಯಮಗಳ ಮೇಲೆ ಪ್ರಾಥಮಿಕ ಚಟುವಟಿಕೆಯಿದ್ದಿತು. ಅಲಿಬಾಗ್ ಪಟ್ಟಣದಲ್ಲಿ ಮಧ್ಯಾಹ್ನದ ಭೋಜನ ಪೂರೈಸಿದ ನಂತರ, ಅಪರಾಹ್ನವನ್ನು ಸಮುದ್ರ ತೀರದಲ್ಲಿ

...contd.

ಕಳೆಯಲಾಯಿತು. ರಾತ್ರಿ ಭೋಜನದ ನಂತರ, ಸೋ.ಇಚಾಕ್ ಅಡಿಜ಼ೆಜ಼್‌ರವರ ಭಾಷಣ ಕೇಳಿದ ಯುವಕರು ದಣಿವಿನ ಕಾರಣ ನಿದ್ರೆಗೆ ಜಾರಿದರು. ಹುಡುಗರು ಸೋ.ಟಿಲ್ಲುರವರ ತೋಟದಮನೆಯಲ್ಲಿ ತಂಗಿದ್ದರೆ, ಹುಡುಗಿಯರು ಸೋ. ಪೀನಾ ಶಾಹ್‌ರವರ ಮನೆಯಲ್ಲಿ ಉಳಿದುಕೊಂಡಿದ್ದರು. ಪೂರ್ಣೋತ್ಸಾಹದಿಂದ ಪ್ರಾರಂಭಗೊಂಡ ಮರುದಿನ ಮುಂಜಾನೆ, ಸಾಧನೆ ಮತ್ತು ಮಿಷನ್ನಿನ ಕಾರ್ಯಗಳಲ್ಲಿ ಹೇಗೆ ತೊಡಗಿಸಿಕೊಳ್ಳಬೇಕು ಮತ್ತು ಹೆಚ್ಚಿನ ಸಮಯ ಮೀಸಲಿಡಬೇಕು ಎಂಬ ಚರ್ಚೆ ನಡೆಯಿತು. ಸಭೆಯ ನಂತರ, ತರುಣರು ಪನ್ವೇಲ್ ಆಶ್ರಮಕ್ಕೆ ಮರಳುವಾಗ ದೊರೆಯುವ ನಾಗೊಥಾನೆ ಎಂಬ ಸಣ್ಣ ಕೇಂದ್ರವನ್ನು



## ಹೊಸ ನೇಮಕಾತಿಗಳು

**ಕೇಂದ್ರ ಉಸ್ತುವಾರಿ ಪ್ರಮುಖರು**

ಸೋ. ಗೌರಿಶಂಕರ್ ದ್ವಿವೇದಿ
ಮಿರ್ಜ಼ಾಪುರ, ಉ.ಪ್ರ.

ಸೋ. ದಿಲೀಪ್ ಕುಮಾರ್ ಸಿಂಗ್
ಫತೇಹ್‌ಪುರ್, ಉ.ಪ್ರ.

ಸೋ. ಪ್ಯಾರೆಲಾಲ್
ಮುಘಲ್‌ಸರಾಯ್, ಉ.ಪ್ರ.

ಸೋ. ರವಿಕುಮಾರ್ ಜೈನ್
ರಾಬರ್ಟ್ಸ್‌ಗಂಜ್(ಸೋನೆಭದ್ರ), ಉ.ಪ್ರ.

ಸೋ. ಜೆ.ಕೆ. ಮೆಹ್ರೋತ್ರ
ಬಹರ್‍ಯಾಚ್, ಉ.ಪ್ರ.

ಸೋ. ನರೇಶ್ ಚಾವ್ಡಾ
ಧನ್‌ಬಾದ್, ಝಾರ್ಖಂಡ್

ಸೋ. ಎಲಿಜ಼ಬೆಥ್ ಡೆನ್ನಿ
ನಿರ್ದೇಶಕರು, ಚರಿತ್ರೆ ಮತ್ತು ದಾಖಲಾತಿ ವಿಭಾಗ

## ಆಮಂತ್ರಣ

ಪ್ರಕಟನಾ ತಂಡವು ಅಭ್ಯಾಸಿಗಳು ಮತ್ತು ಅವರ ಮಕ್ಕಳಿಂದ ಸೃಜನಶೀಲ ಕೃತಿಗಳನ್ನು ಪ್ರಕಟನೆಗಾಗಿ ಆಹ್ವಾನಿಸುತ್ತಿದೆ. ಈ ಕೆಳಗಿನ ವರ್ಗಗಳ ಪ್ರಕಾರ ಕೃತಿಗಳನ್ನು ನೀಡಬಹುದು.

- ಕಲೆ, ತೈಪಚಿತ್ರ, ವರ್ಣಚಿತ್ರ ಅಥವಾ ನಿಮ್ಮ ಸ್ವಂತದ ಯಾವುದೇ ಕಲಾಕೃತಿ.
- ನೀವೇ ಸ್ವತಃ ತೆಗೆದ ಛಾಯಾಚಿತ್ರ
- ಅಡೋಬ್ ಫೋಟೋಶಾಪ್ ಅಥವಾ ಅಂತಹುದೇ ತಂತ್ರಾಂಶ ಬಳಸಿ ಮಾಡಿದ ವಿನ್ಯಾಸಗಳು–ಅದರೊಂದಿಗೆ ಚಿತ್ರಗಳ/ಕಲಾಕೃತಿಗಳ ಮೂಲದ ದಾಖಲಾತಿ ಅಗತ್ಯ.

ಈ ಕಲಾಕೃತಿಗಳ ಕೊಡುಗೆಯನ್ನು ಪ್ರಕಟನಾ ತಂಡವು ಪರಿಶೀಲಿಸಿದ ನಂತರ ಮಿಷನ್ನಿನ ಪುಸ್ತಕಗಳ, ಆಡಿಯೊ–ವಿಡಿಯೋ ಪುಸ್ತಕಗಳ ಮುಖಪುಟದ ವಿನ್ಯಾಸವನ್ನಾಗಿ ಆಯ್ಕೆ ಮಾಡುವ ಅವಕಾಶವಿದೆ. ನೀವು ಕೃತಿಗಳನ್ನು ಕಳುಹಿಸುವ ಮೂಲಕ, ಸ್ಪಿರಿಚುವಲ್ ಹೈರಾರ್ಕಿ ಪಬ್ಲಿಕೇಶನ್ ಟ್ರಸ್ಟ್‌ಗೆ ಪ್ರಕಟನಾ ಹಕ್ಕುಗಳನ್ನು ನೀಡುತ್ತಿರುವಿರೆಂದು ದಯವಿಟ್ಟು ಗಮನಿಸಿ.

ನೀವು ಈ ಕೆಳಗಿನ ವಿಧಾನಗಳಲ್ಲಿ ಅವುಗಳನ್ನು ಕಳುಹಿಸಬಹುದು.

- ಇಲೆಕ್ಟ್ರಾನಿಕ್ ಮಾಧ್ಯಮದ ಮೂಲಕ– design@shpt.in ಗೆ ಕಡಿಮೆ ರೆಸೊಲ್ಯುಷನ್ನಿನ ಡಿಜಿಟಲ್ ಪ್ರತಿಯನ್ನು ಈ–ಮೇಲ್ ಕಳುಹಿಸುವುದು. ಕೃತಿಯು ಆಯ್ಕೆಯಾದಲ್ಲಿ ಉತ್ತಮ ರೆಸೊಲ್ಯುಷನ್ನಿನ ಪ್ರತಿಯನ್ನು ಕೇಳಲಾಗುವುದು.
- ಅಂಚೆಯ ಮೂಲಕ– ಕೆಳಗಿನ ವಿಳಾಸಕ್ಕೆ ಕಳುಹಿಸುವುದು

  *Design Team*
  *Spiritual Hierarchy Publication Trust*
  *Admin Building, Babuji memorial Ashram*
  *Manapakkam, Chennai-600 025*

ದಯವಿಟ್ಟು ನಿಮ್ಮ ಹೆಸರು, ವಯಸ್ಸು(ಮಕ್ಕಳಿಗಾಗಿ), ಅಭ್ಯಾಸಿ ಐಡಿ (ಮಕ್ಕಳು ಪೋಷಕರ ಕೃತಿ ಕಳುಹಿಸಿದಲ್ಲಿ), ಕೇಂದ್ರದ ಹೆಸರು, ವಿಳಾಸ, ದೂರವಾಣಿ ಸಂಖ್ಯೆ ಮತ್ತು ಈಮೇಲ್ ವಿಳಾಸವನ್ನು ನಿಮ್ಮ ಕೃತಿಗಳೊಂದಿಗೆ ನೀಡತಕ್ಕದ್ದು. ನಿಮ್ಮ ಕೃತಿಯು ಆಯ್ಕೆಯಾದಲ್ಲಿ ಪ್ರಕಟನಾ ತಂಡವು ನಿಮ್ಮನ್ನು ಸಂಪರ್ಕಿಸುತ್ತದೆ.

## ಪೂಜ್ಯ ಗುರುಗಳ ಆರೋಗ್ಯವಾರ್ತೆ

ಪ್ರಿಯ ಸಹೋದರ ಸಹೋದರಿಯರೇ,

ಪೂಜ್ಯ ಗುರುಗಳ ಆರೋಗ್ಯದ ವಾರ್ತೆಯನ್ನು ನಿಮಗೆ ನೀಡಲು ಸಾಕಷ್ಟು ತಡವಾದುದಕ್ಕೆ ಕ್ಷಮೆ ಕೇಳುತ್ತಿದ್ದೇನೆ. ಪೂಜ್ಯ ಗುರುಗಳು ಪ್ರಸ್ತುತ ನೀಡುತ್ತಿರುವ ಚಿಕಿತ್ಸೆಗೆ ಉತ್ತಮವಾಗಿ ಸ್ಪಂದಿಸುತ್ತಿದ್ದರೂ, ಔಷಧಗಳ ಅಡ್ಡಪರಿಣಾಮವು ಅವರನ್ನು ನಿಶ್ಶಕ್ತರನ್ನಾಗಿಸಿದೆ.
ಅವರು ನಿಯಮಿತವಾಗಿ ಫಿಸಿಯೊಥೆರಪಿಯನ್ನು ಕೇವಲ ತಮ್ಮ ಮನೋಬಲದಿಂದ ಮಾತ್ರವೇ ಮುಂದುವರೆಸಿದ್ದಾರೆ.

ಅವರ ಉಳಿದುದೆಲ್ಲಾ ಸ್ಥಿರಾಂಶಗಳು ಸಾಮಾನ್ಯ ಸ್ಥಿತಿಯಲ್ಲಿವೆ. ಅವರ ಉತ್ತಮ ಆರೋಗ್ಯಕ್ಕಾಗಿ ದಯವಿಟ್ಟು ಪ್ರಾರ್ಥನೆಯನ್ನು ಮುಂದುವರೆಸಿ.

ಗುರುಗಳ ಆರೋಗ್ಯವನ್ನು ಕಾಪಾಡುತ್ತಿರುವ ನಿಮ್ಮ ಪ್ರಾರ್ಥನೆಗಳಿಗಾಗಿ ಅವರು ಆಭಾರಿಯಾಗಿದ್ದಾರೆ.

ವಿಶ್ವಾಸಪೂರ್ವಕವಾಗಿ,
ಡಾ. ನಟವರ್ ಶರ್ಮಾ


## ಹೊಸ ಪ್ರಕಟನೆಗಳು




ಇನ್ಸ್‌ಪಿರೇಶನ್ಸ್
ಡಿವಿಡಿ ಆಂಗ್ಲ




ಎ ರೇರ್ ಅಪ್ರೊರ್ಚುನಿಟಿ
ಡಿವಿಡಿ ಆಂಗ್ಲ




ಇನ್‌ವರ್ಟೆಂಡೊ
ಡಿವಿಡಿ ಆಂಗ್ಲ



ಒನ್ ವರ್ಲ್ಡ್ ಒನ್ ಫ್ಯಾಮಿಲಿ
ಡಿವಿಡಿ ಆಂಗ್ಲ



ಡಿಸಿಪ್ಲಿನ್ & ಬ್ರದರ್‌ಹುಡ್
ಡಿವಿಡಿ ಆಂಗ್ಲ



ಕಮೆಂಟರಿ ಆನ್ ಟೆನ್ ಮ್ಯಾಕ್ಸಿಮ್ಸ್ &
ಎಫಿಕಸಿ ಆಫ್ ರಾಜಯೋಗ
ಎಂಪಿ3–ಆಂಗ್ಲ




ಕಮೆಂಟರಿ ಆನ್ ಟೆನ್ ಮ್ಯಾಕ್ಸಿಮ್ಸ್ &
ಎಫಿಕಸಿ ಆಫ್ ರಾಜಯೋಗ
ಎಂಪಿ3–ತಮಿಳು




ಕಮೆಂಟರಿ ಆನ್ ಟೆನ್ ಮ್ಯಾಕ್ಸಿಮ್ಸ್ &
ಎಫಿಕಸಿ ಆಫ್ ರಾಜಯೋಗ
ಎಂಪಿ3–ಹಿಂದಿ



ರಿಯಾಲಿಟಿ ಎಟ್ ಡಾನ್
ಎಂಪಿ3–ತಮಿಳು



ವಿಸ್‌ಡಮ್ ಟು ವಂಡರ್
ಆಂಗ್ಲ



ಸ್ಪೈಡರ್ಸ್ ವೆಬ್ ಭಾಗ 3
ಆಂಗ್ಲ




ಇನ್ ಹಿಸ್ ಫುಟ್‌ಸ್ಟೆಪ್ಸ್–ಭಾಗ 3
ತೆಲುಗು



ಡೌನ್ ಮೆಮೊರಿ ಲೇನ್
ಹಿಂದಿ




ಹಾರ್ಟ್‌ಸ್ಪೀಕ್–2003
ತಮಿಳು



ಟೇಲ್ಸ್ ಆಫ್ ವಂಡರ್ ಭಾಗ–1
ಕನ್ನಡ



ಪ್ರಶಿಕ್ಷಕರ ಕೈಪಿಡಿ



ದಿ ಹಾರ್ಟ್ಸ್ ಅಡ್ವೆಂಚರ್

## ಈರೋಡ್ ಆಶ್ರಮ, ತಮಿಳುನಾಡು

ಪ್ರಭಾಕೇಂದ್ರ







ಈರೋಡಿನ ಮೊದಲ ಅಭ್ಯಾಸಿಯು ಕೊಯಮತ್ತೂರಿನಿಂದ ವರ್ಗವಾಗಿ ಬಂದರು. ಈರೋಡಿನಲ್ಲಿ ಅವರು ನಿರ್ಮಿಸಿದ ಹೊಸ ನಿವಾಸದ ಮೊದಲನೇ ಮಹಡಿಯಲ್ಲಿ ಧ್ಯಾನಮಂದಿರವಿದ್ದಿತು. ಹೀಗೆ ಫೆಬ್ರುವರಿ 1982ರಂದು ಈರೋಡ್ ಕೇಂದ್ರವು ಪ್ರಾರಂಭವಾಯಿತು. ಅಭ್ಯಾಸಿಗಳ ಸಂಖೆ ಹೆಚ್ಚಿದಂತೆ, ಅವರು ತಮ್ಮ ಹಿತ್ತಲಿನಲ್ಲಿ ಡೇರೆ ಹಾಕಿ ಸುಮಾರು 200 ಅಭ್ಯಾಸಿಗಳು ಕುಳಿತುಕೊಳ್ಳಲು ಸ್ಥಳಾವಕಾಶ ಕಲ್ಪಿಸಿದರು.

ನವೆಂಬರ್ 2000ರಂದು ಗುರುಗಳು ಅನಿರೀಕ್ಷಿತವಾಗಿ ಈರೋಡಿಗೆ ಭೇಟಿ ನೀಡಿದರು. ಅವರು ಸತ್ಸಂಗವನ್ನು ನಡೆಸಿಕೊಟ್ಟರು ಹಾಗು ಅವರ ಈ ಅಲ್ಪಾವಧಿ ವಾಸ್ತವ್ಯದ ವೇಳೆ ಎಲ್ಲಾ ಅಭ್ಯಾಸಿಗಳಿಗೂ ಆಶ್ರಮ ನಿವೇಶನದ ಅಗತ್ಯ ಕಂಡುಬಂದಿತು. ಶೀಘ್ರದಲ್ಲೇ ರಾಷ್ಟ್ರೀಯ ಹೆದ್ದಾರಿ 47ರ ಬಳಿ, ಭವಾನಿ ಮತ್ತು ಪೆರುಂದುರೈಗಳ ನಡುವಿನ ಅಟ್ಟಯಂಪಾಳ್ಯಂನಲ್ಲಿ ಆಶ್ರಮಕ್ಕಾಗಿ ಜಮೀನು ಖರೀದಿಸಲಾಯಿತು.

ಅಕ್ಟೋಬರ್ 24, 2001ರಂದು ಏಳು ಎಕರೆ ನಿವೇಶನವನ್ನು ನೋಂದಣೀಕರಿಸಲಾಯಿತು. 2.38 ಎಕರೆಯನ್ನು ಆಶ್ರಮಕ್ಕಾಗಿ ಇಟ್ಟು, ಉಳಿದ ಜಾಗವನ್ನು ಅಭ್ಯಾಸಿಗಳಲ್ಲಿ ಹಂಚಲಾಯಿತು. 60X40 ವಿಸ್ತೀರ್ಣದಲ್ಲಿ ಹುಲ್ಲುಛಾವಣಿಯ ಧ್ಯಾನಮಂದಿರವನ್ನು ಡಿಸೆಂಬರ್ 2001ರಲ್ಲಿ ನಿರ್ಮಿಸಲಾಗಿದ್ದು, 250 ಅಭ್ಯಾಸಿಗಳಿಗೆ ಇಲ್ಲಿ ಸ್ಥಳಾವಕಾಶವಿದೆ. ಜಮೀನು ಖರೀದಿಸಿದಾಗಲೇ ಇದ್ದ ಹೆಂಚಿನ ಕಟ್ಟಡವನ್ನು ಎಲ್ಲಾ ಸೌಕರ್ಯಗಳನ್ನೊಳಗೊಂಡ ಗುರುಗಳ ಕುಟೀರವನ್ನಾಗಿ ನವೀಕರಿಸಲಾಯಿತು.

ಏಪ್ರಿಲ್ 1, 2002ರಂದು ನೋಂದಣಿಗಾಗಿ ಈರೋಡಿಗೆ ಆಗಮಿಸಿದ ಗುರುಗಳು ಎರಡು ದಿನಗಳ ಕಾಲ ತಂಗಿದ್ದರು. ಅವರು, "ಈರೋಡ್ ಆಶ್ರಮವು ಸಮೀಪದ ಚಿಕ್ಕ ಕೇಂದ್ರಗಳಿಗಾಗಿ ಮಧ್ಯಬಿಂದುವಾಗಿ ಕಾರ್ಯವೆಸಗಲಿದೆ" ಎಂದರು. ಅಂತೆಯೇ, ಪ್ರತಿ ತಿಂಗಳ ಎರಡನೇ ಭಾನುವಾರದಂದು ಸಮೀಪದ ಕೇಂದ್ರಗಳ ಅಭ್ಯಾಸಿಗಳು ಇಲ್ಲಿ ಸೇರುತ್ತಾರೆ. ಗುರುಗಳು ತಿರುಪ್ಪೂರಿಗೆ ರಸ್ತೆ ಪ್ರಯಾಣ ಮಾಡಿದಾಗಲೆಲ್ಲ ಅವರು ಈರೋಡಿನಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. 2010ರಲ್ಲಿ 4000 ಚ.ಅಡಿ ವಿಸ್ತೀರ್ಣದ, ಭೋಜನಗೃಹ ಸೇರಿದಂತಿರುವ ಪಾಕಶಾಲೆಯ ನಿರ್ಮಾಣವು ಆರಂಭವಾಯಿತು. ತಿರುಪ್ಪೂರಿಗೆ ಹೋಗುವಾಗ, ಮೇ 14, 2011ರಂದು ಈರೋಡಿಗೆ ಆಗಮಿಸಿದ್ದ ಗುರುಗಳು, ಪಾಕಶಾಲೆಯನ್ನು ಉದ್ಘಾಟಿಸಿ, ಸತ್ಸಂಗವನ್ನು ನಡೆಸಿದರು.

ಆಶ್ರಮದಲ್ಲಿ ಶೌಚಾಲಯಗಳು, ವಿದ್ಯುತ್‌ಜನಕ ಕೋಣೆ, ಅತಿಥಿಗೃಹ, ಚೌಕಿದಾರನ ಕೋಣೆ ಮತ್ತು ಮಕ್ಕಳ ಆಟದ ಮೈದಾನದಂತಹ ಸೌಲಭ್ಯಗಳಿವೆ. ಪ್ರತಿ ಭಾನುವಾರ ಈರೋಡ್ ಕೇಂದ್ರದ ಸುಮಾರು 200 ಅಭ್ಯಾಸಿಗಳು ಸತ್ಸಂಗದಲ್ಲಿ ಪಾಲ್ಗೊಳ್ಳುತ್ತಾರೆ ಹಾಗು ಮೂರು ತಿಂಗಳಿಗೊಮ್ಮೆ ಸಮೀಪದ ಕೇಂದ್ರಗಳಾದ ಕರುಮಂಡಂಪಾಳ್ಯಂ, ಅರಚಲೂರು, ಭವಾನಿ, ಪೆರುಂದುರೈ, ಗೋಬಿ, ಕವಿಂಡಪಾಡಿ, ಸತ್ಯಮಂಗಲಂ ಮತ್ತು ಪಲ್ಲಿಪಾಳ್ಯಂನ ಅಭ್ಯಾಸಿಗಳಿಗಾಗಿ ಪೂರ್ಣ ದಿನದ ಕಾರ್ಯಕ್ರಮವನ್ನು ನಡೆಸಲಾಗುತ್ತದೆ. ಹೆಚ್ಚುತ್ತಿರುವ ಅಭ್ಯಾಸಿಗಳ ಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು ಹೊಸ ಧ್ಯಾನಮಂದಿರದ ಯೋಜನೆ ಸಿದ್ಧಗೊಳ್ಳುತ್ತಿದೆ.






To download or subscribe to this newsletter, please visit http://www.sahajmarg.org/newsletter/india For feedback, suggestions and news articles please send email to in.newsletter@srcm.org

© 2013 Shri Ram Chandra Mission ("SRCM"). All rights reserved. "Shri Ram Chandra Mission", "Sahaj Marg", "SRCM", "Constant Remembrance" and the Mission's Emblem are registered Trademarks of Shri Ram Chandra Mission.This Newsletter is intended exclusively for the members of SRCM. The views expressed in the various articles are provided by various volunteers and are not necessarily those of SRCM.